# ಮಾನವ ಹಕ್ಕು ಕೇಂದ್ರಿತ ವಿಧಾನಗಳ ನೆಲೆಯಲ್ಲಿ ಸರ್ವರಿಗೂ ಶಿಕ್ಷಣದ ಪರಿಕಲ್ಪನೆ ಮತ್ತು ಅನುಷ್ಠಾನ

## ಅಧ್ಯಾಯ 1

## ಮಾನವ ಹಕ್ಕುಗಳು ಮತ್ತು ಶಿಕ್ಷಣ

### ಶಿಕ್ಷಣವನ್ನು ಒಂದು ಮಾನವ ಹಕ್ಕಾಗಿ ನೋಡುವುದು

ಮಾನವ ಹಕ್ಕುಗಳನ್ನು ಎತ್ತಿಹಿಡಿಯಲು 1948ರಲ್ಲಿ ಭಾರತ ಸೇರಿದಂತೆ ವಿಶ್ವ ಸಂಸ್ಥೆಯ ಸದಸ್ಯ ರಾಷ್ಟ್ರಗಳು ಅಂಗೀಕರಿಸಿದ ಮಾನವ ಹಕ್ಕುಗಳ ವಿಶ್ವ ಘೋಷಣೆ (Universal Declaration of Human Rights)ಯು ಒಂದು ಅತ್ಯಂತ ಮಹತ್ತ್ವದ ದಾಖಲೆಯಾಗಿದೆ. ಇದು ಪ್ರತಿ ಮನುಷ್ಯನಿಗೆ ಜನ್ಮಜಾತವಾಗಿ ಬಂದಿರುವ, ಅವರಲ್ಲಿ ಅಂತರ್ಗತವಾಗಿದ್ದು, ಬೇರ್ಪಡಿಸಲಾಗದೆ ಇರುವ ಘನತೆಯನ್ನು ಗೌರವಿಸುತ್ತಾ, ತನ್ನ ಜೀವನವನ್ನು ಅರ್ಥಪೂರ್ಣವಾಗಿ ಬದುಕಲು ಅವರಿಗಿರುವ ಹಕ್ಕುಗಳನ್ನು, ಮತ್ತು ಈ ಹಕ್ಕುಗಳನ್ನು ರಕ್ಷಿಸಲು ರಾಷ್ಟ್ರಾಡಳಿತಗಳಿಗೆ ಇರುವ ಬಾಧ್ಯತೆಯನ್ನು ಎತ್ತಿಹಿಡಿಯುತ್ತದೆ. ಇದು ಜಗತ್ತಿನಲ್ಲಿ ಸ್ವಾತಂತ್ರ್ಯ, ನ್ಯಾಯ ಮತ್ತು ಶಾಂತಿ ಸ್ಥಾಪನೆಯ ಅಡಿಗಲ್ಲಾಗಿದೆ. UDHR ಘೋಷಿಸಿರುವ ಮೂವತ್ತು ಮೂಲಭೂತ ಹಕ್ಕುಗಳ ಪೈಕಿ ಶಿಕ್ಷಣ ಪಡೆಯುವ ಹಕ್ಕು ಕೂಡ ಒಂದಾಗಿದೆ. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ 1948ರಲ್ಲಿ ಮಾನವ ಹಕ್ಕುಗಳ ವಿಶ್ವಘೋಷಣೆ ಮಾಡಿದ ಅನಂತರ, ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ (United Nations Educational, Scientific and Cultural Organization) ಸೇರಿದಂತೆ, 1960ರಲ್ಲಿ ಅಂಗೀಕಾರವಾದ ಶಿಕ್ಷಣದಲ್ಲಿ ತಾರತಮ್ಯದ ವಿರುದ್ಧವನ್ನು ಕುರಿತ ಸಮಾವೇಶ (Convention against Discrimination in Education)ದಲ್ಲಿ ಕೈಗೊಂಡ ಒಪ್ಪಂದ, 1966ರಲ್ಲಿ ಅಂಗೀಕೃತವಾದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಮೇಲಿನ ಅಂತಾರಾಷ್ಟ್ರೀಯ ಒಪ್ಪಂದ (the International Covenant on Economic, Social and Cultural Rights), ಮತ್ತು 1981ರಲ್ಲಿ ಅಂಗೀಕೃತವಾದ ಮಹಿಳೆಯರ ವಿರುದ್ಧ ಎಲ್ಲ ರೀತಿಯ ತಾರತಮ್ಯದ ನಿರ್ಮೂಲನಾ ಸಮಾವೇಶ (the Convention on the Elimination of All Forms of Discrimination against Women)ದಲ್ಲಿ ಕೈಗೊಂಡ ಒಪ್ಪಂದ, ಮತ್ತು ಇನ್ನಿತರ ಹಲವಾರು ಜಾಗತಿಕ ಮಾನವ ಹಕ್ಕುಗಳ ಒಡಂಬಡಿಕೆಗಳಲ್ಲಿ ಕೂಡ ಇದನ್ನು ದೃಢೀಕರಿಸಿ, ವಿವರಿಸಲಾಗಿದೆ. ಈ ಎಲ್ಲ ಒಪ್ಪಂದಗಳು, ಎಲ್ಲ ಮಕ್ಕಳು ಕಡ್ಡಾಯವಾಗಿ ಮತ್ತು ಉಚಿತವಾಗಿ ಪಡೆಯಲು ಅರ್ಹವಾಗಿರುವ ಪ್ರಾಥಮಿಕ ಶಿಕ್ಷಣದ ಹಕ್ಕನ್ನು ದೃಢಪಡಿಸುತ್ತವೆ. ಉಚಿತ ಮತ್ತು ಕಡ್ಡಾಯ ಶಿಕ್ಷಣದ ವ್ಯಾಪ್ತಿಗೆ ಕೇವಲ ಪ್ರಾಥಮಿಕ ಶಿಕ್ಷಣ ಮಾತ್ರ ಬರುವುದಿದ್ದರೂ, ಅದರ ಅನಂತರ ಶಿಕ್ಷಣವನ್ನು ಮುಂದುವರಿಸಲು ಮಾಧ್ಯಮಿಕ ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಮತ್ತು ಅದನ್ನು ಎಲ್ಲ ಮಕ್ಕಳಿಗೆ ಲಭ್ಯವಾಗುವಂತೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಲ್ಲಿ UDHR ಸರ್ಕಾರಗಳ ಬಾಧ್ಯತೆಯನ್ನು ಎತ್ತಿಹಿಡಿಯುತ್ತದೆ. ಇದೇ ಉದ್ದೇಶ ಮತ್ತು ಆಶಯದ ಮುಂದುವರಿಕೆಯಾಗಿ, ಉನ್ನತ ಶಿಕ್ಷಣಕ್ಕೆ ಸಮತೆಯ ಮಾನದಂಡದ ಆಧಾರದ ಮೇಲೆ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರವೇಶಾವಕಾಶ ಒದಗಿಸುವುದು, ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸದ ವ್ಯಕ್ತಿಗಳಿಗೆ ಮೂಲಭೂತ ಶಿಕ್ಷಣವನ್ನು ಒದಗಿಸುವ ಜವಾಬ್ದಾರಿ ಕೂಡ ರಾಷ್ಟ್ರಾಡಳಿತಗಳ ಜವಾಬ್ದಾರಿಯಾಗಿದೆ. ಶಿಕ್ಷಣದ ಹಕ್ಕು, ವೈಯಕ್ತಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು, ಮಾನವ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಗೌರವಿಸುವುದು, ಜನರು ಸಮಾಜದಲ್ಲಿ ಸಕ್ರಿಯರಾಗಿ, ಮುಕ್ತವಾಗಿ ಮತ್ತು ಪರಿಣಾಮಕಾರಿಯಾಗಿ ಭಾಗವಹಿಸಲು ಅವರನ್ನು ಪ್ರೋತ್ಸಾಹಿಸುವುದು ಮತ್ತು ಸಮಾಜದಲ್ಲಿ ತಿಳಿವಳಿಕೆ, ಸ್ನೇಹ ಮತ್ತು ಸಹನೆಯನ್ನು ಉತ್ತೇಜಿಸುವುದು ಶಿಕ್ಷಣದ ಗುರಿಯಾಗಬೇಕು ಎಂದು ಪ್ರತಿಪಾದಿಸುತ್ತದೆ.

ಶಿಕ್ಷಣದ ಹಕ್ಕು ಶೈಕ್ಷಣಿಕ ಅವಕಾಶಗಳನ್ನು ಒದಗಿಸುವುದನ್ನು ಮಾತ್ರ ಒಂದು ಬಾಧ್ಯತೆಯಾಗಿ ಪರಿಗಣಿಸದೆ, ಶೈಕ್ಷಣಿಕ ವ್ಯವಸ್ಥೆಯ ಎಲ್ಲ ಹಂತಗಳಲ್ಲಿ ಎಲ್ಲ ರೀತಿಯ ತಾರತಮ್ಯವನ್ನು ತೊಡೆದುಹಾಕುವುದು, ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು, ಶಿಕ್ಷಣದ ಗುಣಮಟ್ಟ ಅಳೆಯಲು ಅಗತ್ಯವಾದ ಕನಿಷ್ಠ ಮಾನದಂಡಗಳನ್ನು ರೂಪಿಸಿವುದು ಮತ್ತು ಗುಣಮಟ್ಟದ ಶಿಕ್ಷಣವನ್ನು ಖಾತರಿಪಡಿಸುವುದನ್ನು ಶಿಕ್ಷಣದ ಹಕ್ಕಿನ ಬಾಧ್ಯತೆಯಾಗಿ ಗುರುತಿಸಲಾಗಿದೆ. ಅಷ್ಟೇ ಅಲ್ಲದೆ, ಯಾವುದೇ ನಾಗರಿಕ, ರಾಜಕೀಯ, ಆರ್ಥಿಕ ಅಥವಾ ಸಾಮಾಜಿಕ ಹಕ್ಕು ಸಾಧನೆಯಾಗಬೇಕಾದರೆ, ಶಿಕ್ಷಣದ ಹಕ್ಕಿನ ಸಾಕ್ಷಾತ್ಕಾರ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು UDHR ಸಾರುತ್ತದೆ.

1989ರಲ್ಲಿ ಜರುಗಿದ ಮಕ್ಕಳ ಹಕ್ಕುಗಳನ್ನು ಕುರಿತ ವಿಶ್ವಸಂಸ್ಥೆಯ ಸಮಾವೇಶ (United Nations Convention on the Rights of the Child)ವು ಮಕ್ಕಳ ಹಕ್ಕುಗಳನ್ನು ಇನ್ನೂ ಬಲಪಡಿಸಿ, ಅದರ ನಾಲ್ಕು ಪ್ರಮುಖ ತತ್ತ್ವಗಳನ್ನು ಮಕ್ಕಳ ಹಕ್ಕುಗಳ ಅನುಷ್ಠಾನದಲ್ಲಿ ಅಳವಡಿಸಿಕೊಳ್ಳುವ ಜವಾಬ್ದಾರಿಯನ್ನು ಎತ್ತಿಹಿಡಿಯುವ ಮೂಲಕ ಅದರ ವ್ಯಾಪ್ತಿಯನ್ನು ಇನ್ನೂ ಹಿಗ್ಗಿಸುತ್ತದೆ. ಈ ತತ್ತ್ವಗಳು ಯಾವುವೆಂದರೆ, ತಾರತಮ್ಯ ಮಾಡದೆ ಇರುವುದು; ಮಗುವಿನ ಪರಮ ಹಿತಾಸಕ್ತಿಗಳ ರಕ್ಷಣೆ; ಜೀವಿಸುವ, ಬದುಕುಳಿಯುವ ಮತ್ತು ಎಷ್ಟು ಮೇಲ್ಮಟ್ಟಕ್ಕೆ ಸಾಧ್ಯವೋ ಅಷ್ಟರ ಮಟ್ಟಿಗೆ ಅಭಿವೃದ್ಧಿ ಹೊಂದುವ ಹಕ್ಕು, ಮತ್ತು ಮಕ್ಕಳು ತಮಗೆ ಸಂಬಂಧವಿರುವ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಅಭಿವ್ಯಕ್ತಿಸುವ ಮತ್ತು ಅದಕ್ಕೆ ತಮ್ಮ ವಯಸ್ಸು ಮತ್ತು ಪ್ರಬುದ್ಧತೆಯ ಮಟ್ಟಕ್ಕೆ ಅನುಗುಣವಾಗಿ ಮಾನ್ಯತೆ ಪಡೆಯುವ ಹಕ್ಕು[8] (ಅನುಬಂಧ II, ಪುಟ 118 ನೋಡಿ). UNCRC ಅಂಗೀಕರಿಸಿದ ಈ ನಾಲ್ಕು ತತ್ತ್ವಗಳು ಮಕ್ಕಳು ತಮ್ಮ ಕಲಿಕೆಯ ಅಗತ್ಯಗಳನ್ನು ತಾವೇ ಗುರುತಿಸಬಲ್ಲ, ಕಲಿಕೆಯ ರೀತಿ ನೀತಿಯನ್ನು ನಿರ್ದೇಶಿಸುವ ಸಾಮರ್ಥ್ಯವುಳ್ಳ ಸಕ್ರಿಯ ಪಾಲುದಾರರು ಎಂಬುದನ್ನು ಎಲ್ಲರೂ ಗುರುತಿಸಬೇಕಾದ ಬಾಧ್ಯತೆಯನ್ನು ಸಾರುತ್ತವೆ. ಮುಂದುವರಿದು, ಮಕ್ಕಳ ಶಿಕ್ಷಣವನ್ನು ಅವರ ಹಕ್ಕುಗಳನ್ನು ಮತ್ತು ಅಗತ್ಯಗಳನ್ನು ಗೌರವಿಸಿ, ಅವರ ಸಾಮರ್ಥ್ಯ ಸಾಧನೆಗೆ ಸಂಪೂರ್ಣವಾಗಿ ಪೂರಕವಾಗುವಂತಹ ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕಾದ ರಾಷ್ಟ್ರಾಡಳಿತಗಳ ಸಂಪೂರ್ಣ ಜವಾಬ್ದಾರಿಯನ್ನು ಇವು ಸ್ಪಷ್ಟಪಡಿಸುತ್ತವೆ. ಈ ಸಮಾವೇಶವು ಶಿಕ್ಷಣದ ಹಕ್ಕನ್ನು ಅದರ ಸಾರ್ವತ್ರಿಕತೆ, ಭಾಗವಹಿಸುವಿಕೆ, ಗೌರವ ಮತ್ತು ಸಮನ್ವಯತೆಯ ನೆಲೆಯಲ್ಲಿ ವಿವರವಾಗಿ ಅರ್ಥೈಸುತ್ತದೆ. ಇದನ್ನು ಮಕ್ಕಳ ಹಕ್ಕುಗಳ ಒಡಂಬಡಿಕೆಯ ದಾಖಲೆ ಪತ್ರ ಮತ್ತು ಮಕ್ಕಳ ಹಕ್ಕುಗಳ ಅನುಷ್ಠಾನದಲ್ಲಿ ಸರ್ಕಾರಗಳು ಸಾಧಿಸಿರುವ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಸ್ಥಾಪಿಸಲಾದ ಅಂತಾರಾಷ್ಟ್ರೀಯ ಸಂಸ್ಥೆಯಾದ ಮಕ್ಕಳ ಹಕ್ಕುಗಳ ಸಮಿತಿ(Committee on the Rights of the Child) ಕೂಡ ವಿವರವಾಗಿ ನಿದರ್ಶನದ ಮೂಲಕ ನಿರೂಪಿಸಿದೆ.

ಮಾನವ ಹಕ್ಕುಗಳ ಒಡಂಬಡಿಕೆಗಳನ್ನು ಜಾರಿಗೊಳಿಸುವಲ್ಲಿ ಸರ್ಕಾರಗಳು ಔಪಚಾರಿಕವಾಗಿ ಕೈಗೊಂಡ ಕ್ರಮಗಳ ಜೊತೆಗೆ, ಹಲವಾರು ಜಾಗತಿಕ ಸಮಾವೇಶಗಳು ಕೂಡ ಶಿಕ್ಷಣದ ಹಕ್ಕನ್ನು ಪ್ರತಿಪಾದಿಸಿವೆ. ವಿಶ್ವಸಂಸ್ಥೆಯ ಒಡಂಬಡಿಕೆಗಳಿಗೆ ಇರುವ ಕಾನೂನಾತ್ಮಕ ಬೆಂಬಲ, ಈ ಸಮಾವೇಶಗಳಲ್ಲಿ ಕೈಗೊಂಡ ನಿರ್ಧಾರಗಳಿಗೆ ಇಲ್ಲದಿದ್ದರೂ, ಈ ಸಮಾವೇಶಗಳು ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಪಟ್ಟ ಕಾರ್ಯಯೋಜನೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಒದಗಿಸುವುದರ ಜೊತೆಗೆ, ಅವುಗಳ ಅನುಷ್ಠಾನಕ್ಕೆ ಅಗತ್ಯವಾದ ಬದ್ಧತೆ ಮತ್ತು ಕಾಲಾವಧಿಯ ಚೌಕಟ್ಟುಗಳನ್ನು ಒದಗಿಸಿವೆ. 1990ರಲ್ಲಿ ನಡೆದ 'ಸರ್ವರಿಗೂ ಶಿಕ್ಷಣ'ದ ಕುರಿತ ವಿಶ್ವ ಸಮ್ಮೇಳನ(World Conference on Education for All) 2000ನೇ ಇಸವಿಯ ಒಳಗೆ ಎಲ್ಲರೂ ಪ್ರಾಥಮಿಕ ಶಿಕ್ಷಣದ ಲಾಭವನ್ನು ಪಡೆಯುವ ಗುರಿಯನ್ನು ಹೊಂದಿತ್ತು, ಆದರೆ ಆ ಗುರಿ ಸಂಪೂರ್ಣವಾಗಿ ಸಾಧಿಸಲಾಗದ ಕಾರಣ ಮತ್ತೆ 2000ದಲ್ಲಿ ನಡೆದ ವಿಶ್ವ ಶಿಕ್ಷಣ ವೇದಿಕೆ(World Education Forum)ಯಲ್ಲಿ ಇದನ್ನು ಮರುಪರಿಶೀಲಿಸಿ, ಗುರಿಯನ್ನು 2015ಕ್ಕೆ ನಿಗದಿಪಡಿಸಲಾಯಿತು. ಈ ವೇದಿಕೆಯು ಮಕ್ಕಳ ಹಕ್ಕುಗಳನ್ನು ಪೂರ್ವ ಪ್ರಾಥಮಿಕ ಹಂತದ ಮಕ್ಕಳ ಪಾಲನೆ ಮತ್ತು ಶಿಕ್ಷಣ(early childhood care and education)ಕ್ಕೂ ವಿಸ್ತರಿಸಿ, ಅದರ ವ್ಯಾಪ್ತಿಯ ವಿಸ್ತರಣೆ ಮತ್ತು ಗುಣಮಟ್ಟ ಸುಧಾರಣೆ, ಜೊತೆಗೆ ಶಿಕ್ಷಣದಲ್ಲಿನ ಲಿಂಗ ಅಸಮಾನತೆಗಳ ನಿವಾರಣೆ ಮತ್ತು ಶಿಕ್ಷಣದಲ್ಲಿ ಗುಣಮಟ್ಟದ ಸುಧಾರಣೆಗೆ ತನ್ನ ಬದ್ಧತೆಯನ್ನು ಸಾರಿತು.

ಇಷ್ಟೇ ಅಲ್ಲದೆ, ಇತರ ಅಂತಾರಾಷ್ಟ್ರೀಯ ಸಮುದಾಯಗಳು ಮತ್ತು ಪ್ರಮುಖ ಅಭಿವೃದ್ಧಿ ಸಂಸ್ಥೆಗಳು ಸಹಸ್ರಮಾನದ ಘೋಷಣೆ(Millennium Declaration )ಯಲ್ಲಿ ಹೇಳಿರುವ ಸಹಸ್ರಮಾನದ ಅಭಿವೃದ್ಧಿ ಗುರಿ((Millennium Development Goals) ಗಳನ್ನು ಒಪ್ಪಿಕೊಂಡು, ಅದಕ್ಕೆ ತಮ್ಮ ಬದ್ಧತೆ ಸಾರಿವೆ. ಇದು 2015ರ ಹೊತ್ತಿಗೆ ಎಲ್ಲಾ ಹುಡುಗಿಯರು ಮತ್ತು ಹುಡುಗರು ಪ್ರಾಥಮಿಕ ಹಂತದ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ಮತ್ತು ಎಲ್ಲಾ ಹಂತಗಳಲ್ಲಿ ಲಿಂಗ ಅಸಮಾನತೆಯನ್ನು ತೊಡೆದುಹಾಕುವ ಬದ್ಧತೆಯನ್ನು ಸಾರುತ್ತದೆ (ಅನುಬಂಧ III, ಪುಟ 120 ನೋಡಿ).

2-4 ಡಿಸೆಂಬರ್ 2005ರಲ್ಲಿ ಇಂಡೋನೇಷಿಯಾದ ಜಕಾರ್ತದಲ್ಲಿ ನಡೆದ 'ಮೂಲಭೂತ ಮಾನವ ಹಕ್ಕಾಗಿ ಶಿಕ್ಷಣ ಮತ್ತು ಅದರ ಅನುಷ್ಠಾನಕ್ಕಾಗಿ ಅಗತ್ಯವಿರುವ ಹಣಕಾಸಿಗಾಗಿ ಕಾನೂನು ಚೌಕಟ್ಟಿನ ಅಭಿವೃದ್ಧಿ' (International Conference on the Right to Basic Education as a Fundamental Human Right and the Legal Framework for Its Financing) ಸಮಾವೇಶವು ಜಕಾರ್ತಾ ಘೋಷಣೆ(Jakarta Declaration)ಯನ್ನು ಅಂಗೀಕರಿಸಿತು. ಈ ಎಲ್ಲ ಪ್ರಯತ್ನಗಳು, ಶಿಕ್ಷಣದ ಹಕ್ಕು

### ಮಕ್ಕಳ ಹಕ್ಕುಗಳ ಸಮಾವೇಶದಲ್ಲಿ ಪರಿಚಯಿಸಲಾದ ದೃಷ್ಟಿಕೋನಗಳು

- ಶಿಕ್ಷಣದ ಹಕ್ಕನ್ನು ಎಲ್ಲರಿಗೂ ಸಮಾನ ಅವಕಾಶ ಎಂಬ ತತ್ತ್ವದ ಆಧಾರದ ಮೇಲೆ ಸಾಧಿಸಬೇಕು.
- ನಿಯಮಿತ ಶಾಲಾ ಹಾಜರಾತಿಯನ್ನು ಪ್ರೋತ್ಸಾಹಿಸಲು ಮತ್ತು ಮಕ್ಕಳ ಡ್ರಾಪ್‌ಔಟ್ ಪ್ರಮಾಣವನ್ನು ಕಡಮೆ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಕೇವಲ ಔಪಚಾರಿಕ ಶಿಕ್ಷಣ ನೀಡುವುದಷ್ಟೇ ಸಾಕಾಗುವುದಿಲ್ಲ. ಬಡತನ ಮತ್ತು ತಾರತಮ್ಯದಂತಹ ಅಡೆತಡೆಗಳನ್ನು ಕೂಡ ತೊಡೆದುಹಾಕಬೇಕು ಮತ್ತು ಮಕ್ಕಳಿಗೆ ಪ್ರಯೋಜನವಾಗುವಂತಹ ಗುಣಮಟ್ಟದ ಶಿಕ್ಷಣವನ್ನು ಒದಗಿಸಬೇಕು.
- ಮಗುವಿಗೆ ಶಿಸ್ತು ಕಲಿಸುವ ಪ್ರಕ್ರಿಯೆಯಲ್ಲಿ, ಅವನ/ಅವಳ ಘನತೆಗೆ ಧಕ್ಕೆಯಾಗದಂತೆ ನಡೆದುಕೊಳ್ಳಬೇಕು ಮತ್ತು ಎಲ್ಲ ರೀತಿಯ ಹಿಂಸಾಚಾರದಿಂದ ರಕ್ಷಣೆ ಪಡೆಯಲು ಮಗುವಿಗೆ ಇರುವ ಹಕ್ಕಿಗೆ ಚ್ಯುತಿ ಬರದಂತೆ, ಶೈಕ್ಷಣಿಕ ವಾತಾವರಣದಲ್ಲಿ ಮಗುವನ್ನು ಗೌರವಯುತವಾಗಿ ನೋಡಿಕೊಳ್ಳಬೇಕು.
- ಪ್ರತಿ ಮಗುವಿನ ಸಾಮರ್ಥ್ಯ ಮತ್ತು ಪಠ್ಯಕ್ರಮದ ವ್ಯಾಪ್ತಿಗೆ ಅನುಗುಣವಾಗಿ ಶಿಕ್ಷಣದ ಗುರಿಗಳನ್ನು ವ್ಯಾಖ್ಯಾನಿಸಬೇಕಾಗಿದ್ದು, ಶಿಕ್ಷಣವೆಂಬುದು ಮಾನವ ಹಕ್ಕುಗಳನ್ನು ಉತ್ತೇಜಿಸಲು ಮತ್ತು ಗೌರವಿಸಲು ಅಗತ್ಯವಾದ ಪೂರ್ವಸಿದ್ಧತಾ ಪ್ರಕ್ರಿಯೆಯಾಗಬೇಕು. ಈ ವಿಧಾನವನ್ನು ಶಿಕ್ಷಣದ ಗುರಿಗಳನ್ನು ಕುರಿತು ಮಾಡಿರುವ ಸಾಮಾನ್ಯ ಟಿಪ್ಪಣಿ (General Comment)ಯಲ್ಲಿ ವಿವರಿಸಲಾಗಿದೆ. ಇದರಲ್ಲಿ, ಮಕ್ಕಳ ಹಕ್ಕುಗಳ ಸಮಿತಿ (Committee on the Rights of the Child)ಯು 29ನೇ ವಿಧಿಯ ನಿಟ್ಟಿನಲ್ಲಿ ಗಮನ ಸೆಳೆದು, ಶಿಶು ಕೇಂದ್ರಿತ, ಶಿಶು ಸ್ನೇಹಿ ಮತ್ತು ಅವರ ಸಾಮರ್ಥ್ಯ ವರ್ಧನೆ ಮಾಡುವ ಶಿಕ್ಷಣ ವಿಧಾನವನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದು ಒತ್ತಿಹೇಳುತ್ತದೆ ಮತ್ತು ಶಿಕ್ಷಣವು ಔಪಚಾರಿಕ ಶಾಲಾ ಶಿಕ್ಷಣದ ವ್ಯಾಪ್ತಿಯನ್ನು ಮೀರಿ, ಸಕಾರಾತ್ಮಕ ಬೆಳವಣಿಗೆ ಮತ್ತು ಕಲಿಕೆ ಸಾಧ್ಯಮಾಡುವಂತಹ ವಿಶಾಲವಾದ ಜೀವನ ಅನುಭವಗಳನ್ನು ಒಳಗೊಳ್ಳುತ್ತದೆ.
- ಬಾಲ್ಯವನ್ನು ಕುರಿತಂತೆ ಕೊಟ್ಟಿರುವ ಸಾಮಾನ್ಯ ಟಿಪ್ಪಣಿಯಲ್ಲಿ, ಮಕ್ಕಳ ಹಕ್ಕುಗಳ ಸಮಿತಿಯು, ಶಿಕ್ಷಣದ ಹಕ್ಕು ಮಗುವಿನ ಹುಟ್ಟಿನ ಜೊತೆಗೆ ಪ್ರಾರಂಭವಾಗುತ್ತದೆ ಎಂದು ವ್ಯಾಖ್ಯಾನಿಸುತ್ತದೆ ಮತ್ತು ಮಕ್ಕಳ ಬೆಳವಣಿಗೆಯನ್ನು ಉತ್ತೇಜಿಸಲು ಪೋಷಕರ ಸಾಮರ್ಥ್ಯವನ್ನು ಹೆಚ್ಚಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಮತ್ತು ಕಾರ್ಯಕ್ರಮಗಳನ್ನು ಆಯೋಜಿಸಲು ಸರ್ಕಾರಗಳನ್ನು ಪ್ರೋತ್ಸಾಹಿಸುತ್ತದೆ.

ಮೂಲ: United Nations Convention on the Rights of the Child, 1989; Committee on the Rights of the Child, 'General Comment No. 1: The aims of education, article 29 (1) (2001)', CRC/GC/2001/1, 2001; Committee on the Rights of the Child, 'General Comment No. 7: Implementing child rights in early childhood', CRC/C/GC7, 200

ಮತ್ತು ಅಭಿವೃದ್ಧಿಯ ಹಕ್ಕಿನೊಂದಿಗೆ ಅವಿನಾಭಾವ ಸಂಬಂಧ ಇರುವುದನ್ನು ಗುರುತಿಸಿ, ಅದನ್ನು ಒಂದು ಅಂತಾರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಹಕ್ಕಾಗಿ ಪರಿಗಣಿಸಿ, ಈ ಹಕ್ಕು ಸಂಪೂರ್ಣವಾಗಿ ಸಾಕ್ಷಾತ್ಕಾರವಾಗಬೇಕಾದರೆ, ಅದಕ್ಕೆ ಕಾನೂನು ಮತ್ತು ಸಾಂವಿಧಾನಿಕ ರಕ್ಷಣೆ ಅನಿವಾರ್ಯ ಎಂಬುದನ್ನು ಸಾರುತ್ತವೆ.

**ಅಭಿವೃದ್ಧಿಗೆ ಮಾನವ ಹಕ್ಕು ಆಧಾರಿತ ವಿಧಾನಗಳು**

ಇತ್ತೀಚಿನ ವರ್ಷಗಳಲ್ಲಿ ಅಭಿವೃದ್ಧಿ ಸಾಧಿಸುವಲ್ಲಿ ಮಾನವ ಹಕ್ಕು-ಆಧಾರಿತ ವಿಧಾನಗಳ ಬಳಕೆಯ ಮೇಲೆ ಹೆಚ್ಚಿನ ಒತ್ತು ನೀಡಲಾಗಿದೆ. ಆವಶ್ಯಕತೆ ಆಧಾರಿತ ((needs-based) ಅಥವಾ ಸೇವೆ-ವಿತರಣೆ ಆಧಾರಿತ ವಿಧಾನಗಳು (service-delivery approaches) ಬಡತನವನ್ನು ಗಣನೀಯವಾಗಿ ಕಡಮೆ ಮಾಡಲು ವಿಫಲವಾಗಿದೆ ಎಂಬುದು ಹೆಚ್ಚುಹೆಚ್ಚಾಗಿ ಅರ್ಥವಾಗುತ್ತಿರುವುದು ಈ ಬದಲಾವಣೆಯ ಹಿಂದಿನ ಭಾಗಶಃ ಕಾರಣವಾದರೆ, ಬಡವರ ಅಗತ್ಯಗಳಿಗೆ ಸಂವೇದನಾಶೀಲರಾಗಿರದ ಅಧಿಕಾರಿಗಳು ಹೆಚ್ಚಾಗಿ ಈ ಕ್ರಮಗಳನ್ನು ಕೈಗೊಳ್ಳುವುದು ಈ ವಿಧಾನಗಳ ಒಂದು ಗಮನಾರ್ಹವಾದ ಮಿತಿಯಾಗಿದೆ. ಅಷ್ಟೇ ಅಲ್ಲದೆ, ಯಾವುದೇ ಒಂದು ವಿಧಾನವನ್ನು ಮಾತ್ರ ಅಳವಡಿಸಿಕೊಳ್ಳುವುದಕ್ಕಿಂತ, ಮಾನವ ಹಕ್ಕುಗಳು, ಅಭಿವೃದ್ಧಿ ಮತ್ತು ಚಳವಳಿಯ (activism) ಮಾರ್ಗಗಳನ್ನು ಒಟ್ಟಾಗಿ ಬಳಸಿ, ಕೆಲಸ ಮಾಡುವುದು ಹೆಚ್ಚು ಪರಿಣಾಮಕಾರಿ ಎಂಬ ಅಭಿಪ್ರಾಯ ಬಲವಾಗಿದೆ.

1997ರಲ್ಲಿ ಪ್ರಾರಂಭವಾದ ವಿಶ್ವಸಂಸ್ಥೆಯ ಸುಧಾರಣಾ ಕಾರ್ಯಕ್ರಮ(UN Programme for Reform)ಗಳ ಭಾಗವಾಗಿ, ವಿಶ್ವ ಸಂಸ್ಥೆಯ ಮುಖ್ಯ ಕಾರ್ಯದರ್ಶಿಯವರು ವಿಶ್ವಸಂಸ್ಥೆಯ ವ್ಯಾಪ್ತಿಯೊಳಗೆ ಬರುವ ಎಲ್ಲ ಸಂಸ್ಥೆಗಳಿಗೆ ತಮ್ಮ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳಲ್ಲಿ ಮಾನವ ಹಕ್ಕುಗಳನ್ನು ಮುಖ್ಯವಾಗಿ ಪರಿಗಣಿಸಲು ಕರೆ ನೀಡಿದರು. ಇದು ವಿವಿಧ ಸಂಸ್ಥೆಗಳ ನಡುವೆ ಸಮಾಲೋಚನೆಯ ಪ್ರಕ್ರಿಯೆಗೆ ಅವಕಾಶ ಮಾಡಿಕೊಟ್ಟಿತು. ಇದರ ಫಲವಾಗಿ ವಿಶ್ವಸಂಸ್ಥೆಯ ಅಭಿವೃದ್ಧಿ ಸಮಿತಿ (UN Development Group) ವಿಶ್ವ ಸಂಸ್ಥೆಯ ಸಾಮಾನ್ಯ ತಿಳಿವಳಿಕೆಯ ಹೇಳಿಕೆ (UN Statement of Common Understanding)ಯನ್ನು ಅಂಗೀಕರಿಸಿತು (ಅನುಬಂಧ I, ಪುಟ 113 ನೋಡಿ). ಈ ಹೇಳಿಕೆಯು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಮಾನದಂಡಗಳ ಆಧಾರದ ಮೇಲೆ ಅಭಿವೃದ್ಧಿ ಚಟುವಟಿಕೆಗಳನ್ನು ಗುರುತಿಸಲು, ಯೋಜಿಸಲು, ವಿನ್ಯಾಸಗೊಳಿಸಲು ಮತ್ತು ಮೇಲ್ವಿಚಾರಣೆ ಮಾಡಲು ಪರಿಕಲ್ಪನಾ, ವಿಶ್ಲೇಷಣಾತ್ಮಕ ಮತ್ತು ಕ್ರಮಶಾಸ್ತ್ರೀಯ (methodological) ಚೌಕಟ್ಟನ್ನು ಒದಗಿಸುತ್ತದೆ. ಮೂಲಭೂತವಾಗಿ, ಇದು ಯೋಜನೆಗಳು, ಕಾರ್ಯತಂತ್ರಗಳು ಮತ್ತು ನೀತಿಗಳನ್ನು ಒಳಗೊಂಡಂತೆ ಅಭಿವೃದ್ಧಿ ಕಾರ್ಯಕ್ರಮಗಳ ಸಂಪೂರ್ಣ ಪ್ರಕ್ರಿಯೆಯಲ್ಲಿ ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ನೀತಿ ನಿಯಮಗಳು, ಮಾನದಂಡಗಳು, ಮತ್ತು ತತ್ತ್ವಗಳನ್ನು ಒಗ್ಗೂಡಿಸುತ್ತದೆ. ಇದು ಮಾನವ ಹಕ್ಕುಗಳನ್ನು ಗುರುತಿಸಿ, ಗೌರವಿಸಿ, ರಕ್ಷಿಸಲು ಮತ್ತು ತಮ್ಮ ಹಕ್ಕುಗಳನ್ನು ಪಡೆಯಲು ವ್ಯಕ್ತಿಗಳು ಮತ್ತು ಸಮುದಾಯಗಳ ಸಬಲೀಕರಣ ಮಾಡಲು ಸರ್ಕಾರಗಳು ಮತ್ತು ಅದರ ಅಂಗಸಂಸ್ಥೆಗಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತದೆ.

**ಹಕ್ಕು-ಆಧಾರಿತ ವಿಧಾನದ ಆಧಾರ ಸೂತ್ರಗಳು**

- **ಸಾರ್ವತ್ರಿಕತೆ ಮತ್ತು ಬೇರ್ಪಡಿಸಲಾಗದಿರುವಿಕೆ (**Universality and inalienability)**:** ಮಾನವ ಹಕ್ಕುಗಳು ಸಾರ್ವತ್ರಿಕವಾಗಿ, ಜಗತ್ತಿನ ಎಲ್ಲೆಡೆ ಸರ್ವರಿಗೂ ಸಮಾನವಾಗಿ ಇರುವಂತಹುಗಳು. ಇದು ಪ್ರತಿಯೊಬ್ಬ ವ್ಯಕ್ತಿಯ ಹಕ್ಕು ಮತ್ತು ಯಾವುದೇ ವ್ಯಕ್ತಿಯಿಂದ ಅದನ್ನು ಕಸಿದುಕೊಳ್ಳಲು, ಬೇರ್ಪಡಿಸಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯು ಸ್ವಂತ ಇಚ್ಛೆಯಿಂದ ಅದನ್ನು ಬಿಟ್ಟುಕೊಡಲಾಗಲಿ ಅಥವಾ ಇತರರು ಅದನ್ನು ಅವನಿಂದ/ಅವಳಿಂದ ಕಸಿದುಕೊಳ್ಳಲಾಗಲಿ ಸಾಧ್ಯವಿಲ್ಲ. ಮಾನವ ಹಕ್ಕುಗಳ ವಿಶ್ವ ಘೋಷಣೆ(Universal Declaration of Human Rights)ಯ ವಿಧಿ 1 ರಲ್ಲಿ ಹೇಳಿದಂತೆ, "ಎಲ್ಲ

ಮಾನವರು ಘನತೆ ಮತ್ತು ಹಕ್ಕುಗಳಿಗೆ ಸಂಬಂಧಪಟ್ಟಂತೆ ಸ್ವತಂತ್ರವಾಗಿಯೂ, ಸಮಾನವಾಗಿಯೂ ಹುಟ್ಟಿರುತ್ತಾರೆ" (All human beings are born free and equal in dignity and rights).

- **ಅವಿಭಾಜ್ಯತೆ** (Indivisibility): ಮಾನವ ಹಕ್ಕುಗಳನ್ನು ವಿಭಜಿಸಲು ಸಾಧ್ಯವಿಲ್ಲ. ನಾಗರಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಅಥವಾ ಸಾಮಾಜಿಕ ಸಂದರ್ಭಗಳು ಏನೇ ಇರಲಿ, ಮಾನವ ಹಕ್ಕುಗಳು ಮಾತ್ರ ಪ್ರತಿಯೊಬ್ಬ ವ್ಯಕ್ತಿಯ ಘನತೆಯ ಅಂತರ್ಗತ, ಅವಿಭಾಜ್ಯ ಅಂಗವಾಗಿವೆ. ಎಲ್ಲ ಮಾನವ ಹಕ್ಕುಗಳ ಸ್ಥಾನಮಾನ ಒಂದೇ ಆಗಿದ್ದು ಅವುಗಳನ್ನು ಶ್ರೇಣೀಕರಿಸಲಾಗುವುದಿಲ್ಲ ಕೂಡ.

- **ಪರಸ್ಪರ ಅವಲಂಬನೆ ಮತ್ತು ಪರಸ್ಪರ ಸಂಬಂಧ (**Interdependence and interrelatedness)**:** ಒಂದು ಹಕ್ಕಿನ ಸಾಕ್ಷಾತ್ಕಾರ ಸಂಪೂರ್ಣವಾಗಿ ಅಥವಾ ಭಾಗಶಃ ಇತರ ಹಕ್ಕುಗಳ ಸಾಕ್ಷಾತ್ಕಾರದ ಮೇಲೆ ಅವಲಂಬಿತವಾಗಿರುತ್ತದೆ. ಉದಾಹರಣೆಗೆ, ಆರೋಗ್ಯದ ಹಕ್ಕಿನ ಸಾಕ್ಷಾತ್ಕಾರವು ಮಾಹಿತಿಯ ಹಕ್ಕಿನ ಸಾಕ್ಷಾತ್ಕಾರದ ಮೇಲೆ ಅವಲಂಬಿತವಾಗಿದೆ.

- **ಸಮಾನತೆ ಮತ್ತು ತಾರತಮ್ಯ ಇಲ್ಲದಿರುವಿಕೆ(**Equality and non-discrimination): ಎಲ್ಲ ವ್ಯಕ್ತಿಗಳು, ಮನುಷ್ಯರಾಗಿ ಸಮಾನರು ಮತ್ತು ಪ್ರತಿಯೊಬ್ಬ ವ್ಯಕ್ತಿಯು ತನ್ನ ಅಂತರ್ಗತ ಘನತೆಯ ಕಾರಣದಿಂದ ಯಾವುದೇ ರೀತಿಯ ತಾರತಮ್ಯವಿಲ್ಲದೆ ತನ್ನ ಹಕ್ಕುಗಳಿಗೆ ಅರ್ಹನಾಗಿರುತ್ತಾನೆ/ಳೆ. ಹಕ್ಕು-ಆಧಾರಿತ ವಿಧಾನವು ತಾರತಮ್ಯ ಮತ್ತು ಅಸಮಾನತೆಯನ್ನು ಪರಿಹರಿಸುವಲ್ಲಿ ನಿರ್ದಿಷ್ಟವಾಗಿ ನಾವು ಗಮನ ಕೊಡುವುದನ್ನು ಅಪೇಕ್ಷಿಸುತ್ತದೆ. ಸಮಾಜದ ಅಂಚಿನಲ್ಲಿರುವ ಸಮುದಾಯಗಳ ಹಕ್ಕುಗಳು ಮತ್ತು ಯೋಗಕ್ಷೇಮವನ್ನು ರಕ್ಷಿಸಲು ಅಗತ್ಯವಾದ ಅಭಿವೃದ್ಧಿ ಸಾಧನಗಳನ್ನು ಸೇರಿಸುವ ಅಗತ್ಯವಿದೆ. ದುರ್ಬಲ ವರ್ಗದ ಜನರನ್ನು ಉದಾಹರಣೆಗೆ, ಲಿಂಗ, ಧರ್ಮ, ಜನಾಂಗೀಯತೆ, ಭಾಷೆ ಮತ್ತು ಅಂಗವೈಕಲ್ಯ, ಇತ್ಯಾದಿ - ಮುನ್ನೆಲೆಗೆ ತರಲು, ಅವರು ಜನರ ಕಣ್ಣಿಗೆ ಕಾಣುವಂತೆ ಮಾಡಲು, ದತ್ತಾಂಶವನ್ನು ವಿಂಗಡಣೆ ಮಾಡಬೇಕಾಗುತ್ತದೆ. ಇದಲ್ಲದೆ, ಎಲ್ಲ ಅಭಿವೃದ್ಧಿ ನಿರ್ಧಾರಗಳು, ನೀತಿಗಳು ಮತ್ತು ಉಪಕ್ರಮಗಳು, ಸ್ಥಳೀಯ ಭಾಗೀದಾರರನ್ನು ಸಬಲೀಕರಣಗೊಳಿಸಲು ಪ್ರಯತ್ನಿಸುವ ಸಂದರ್ಭದಲ್ಲಿ, ಅಧಿಕಾರದ ಅಸಮತೋಲನಕ್ಕೆ ಮತ್ತೆ ದಾರಿಮಾಡಿಕೊಡುವ ಅಥವಾ ಅದನ್ನು ಇನ್ನಷ್ಟು ಬಲಗೊಳಿಸುವ, ಅಥವಾ ಹೊಸ ಅಸಮತೋಲನಗಳಿಗೆ ದಾರಿಮಾಡಿಕೊದುವ ಅಪಾಯಗಳ ಬಗ್ಗೆ ಸ್ಪಷ್ಟವಾದ ಮುನ್ನೆಚ್ಚರಿಕೆ ವಹಿಸುವ ಅಗತ್ಯವಿದೆ.

- **ಭಾಗವಹಿಸುವಿಕೆ ಮತ್ತು ಒಳಗೊಳ್ಳುವಿಕೆ (**Participation and inclusion)**:** ಪ್ರತಿಯೊಬ್ಬರು ವೈಯಕ್ತಿಕವಾಗಿ ಮತ್ತು ಒಂದು ಸಮುದಾಯವಾಗಿ, ವಿಶ್ವದ ನಾಗರಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ, ಮುಕ್ತವಾಗಿ ಮತ್ತು ಅರ್ಥಪೂರ್ಣವಾಗಿ ಭಾಗವಹಿಸಲು ಮತ್ತು ತಮ್ಮ ಕೊಡುಗೆ ನೀಡಲು ಮತ್ತು ಈ ಅಭಿವೃದ್ಧಿಯ ಸಂತೋಷವನ್ನು ಸಮನಾಗಿ ಪಡೆಯಲು ಅರ್ಹರಾಗಿದ್ದಾರೆ. ಇದರ ಮೂಲಕವಾಗಿ ಅವರಿಗೆ ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳನ್ನು ಸಂಪೂರ್ಣವಾಗಿ ಆನಂದಿಸಲು ಸಾಧ್ಯವಾಗುತ್ತದೆ.

- **ಸಬಲೀಕರಣ(**Empowerment)**:** ಒಬ್ಬ ವ್ಯಕ್ತಿ ತನ್ನ ಹಕ್ಕುಗಳು ಏನು ಎಂಬುದನ್ನು ತಿಳಿದುಕೊಂಡು, ಅವುಗಳನ್ನು ಸಂಪೂರ್ಣವಾಗಿ ಅನುಭವಿಸಲು ತನ್ನ ಹಕ್ಕೊತ್ತಾಯವನ್ನು ಮುಂದಿಡುವ ನಿಟ್ಟಿನಲ್ಲಿ ಆತನ/ಅವಳ ಸಾಮರ್ಥ್ಯ ವರ್ಧನೆ ಮಾಡಲು ಸಬಲೀಕರಣದ ಪ್ರಕ್ರಿಯೆಗಳು ಸಹಾಯ ಮಾಡುತ್ತವೆ. ಸರ್ಕಾರದ ನೀತಿಗಳು, ಶಾಸನಗಳು

ಅಥವಾ ಸೇವೆಗಳಿಗೆ ಕಾಯುವ ಬದಲು, ತಮ್ಮ ಹಕ್ಕುಗಳನ್ನು ತಿಳಿದುಕೊಂಡು, ಅದನ್ನು ಪಡೆಯಲು ಅವರಿಗೆ ಅಧಿಕಾರ ನೀಡಲಾಗುತ್ತದೆ. ಈ ನಿಟ್ಟಿನಲ್ಲಿ, ಜನರಿಗೆ ಯಾರು ಈ ಸೌಲಭ್ಯಗಳನ್ನು ಒದಗಿಸಬೇಕೊ ಅವರು ತಮ್ಮ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುವ ರೀತಿಯಲ್ಲಿ ಅವರನ್ನು ಹೊಣೆಗಾರರನ್ನಾಗಿ ಮಾಡಲು ವ್ಯಕ್ತಿಗಳು ಮತ್ತು ಸಮುದಾಯಗಳ ಸಾಮರ್ಥ್ಯವನ್ನು ಬೆಳೆಸುವ ಉಪಕ್ರಮಗಳನ್ನು ಕೈಗೊಳ್ಳಬೇಕು. ಜನರು ತಮ್ಮ ಜೀವನವನ್ನು ಬದಲಾಯಿಸಲು, ತಮ್ಮ ಸಮುದಾಯಗಳ ಸ್ಥಿತಿಗತಿ ಸುಧಾರಿಸಲು ಮತ್ತು ತಮ್ಮ ಭವಿಷ್ಯವನ್ನು ತಾವೇ ರೂಪಿಸಲು ಅಗತ್ಯವಾದ ಅಧಿಕಾರ, ಶಕ್ತಿ ಮತ್ತು ಸಾಮರ್ಥ್ಯಗಳನ್ನು ಜನರ ಕೈಗೆ ಕೊಡುವುದು ಇದರ ಗುರಿಯಾಗಿದೆ.

- **ಕಾನೂನಿಗೆ ಬದ್ಧತೆ ಮತ್ತು ಗೌರವವನ್ನು ತೋರಿಸುವುದು(**Accountability and respect for the rule of law)**:** ಹಕ್ಕು-ಆಧಾರಿತ ವಿಧಾನವು ಅಭಿವೃದ್ಧಿ ಪ್ರಕ್ರಿಯೆಯಲ್ಲಿ 'ಹಕ್ಕುದಾರ'ರು ಮತ್ತು ಅದಕ್ಕೆ ಪೂರಕವಾಗಿ 'ಹೊಣೆಗಾರ'ರನ್ನು ಗುರುತಿಸುವ ಮೂಲಕ ಹೊಣೆಗಾರರು ತಮ್ಮ ಜವಾಬ್ದಾರಿಗಳನ್ನು ಪೂರೈಸಲು ಅಗತ್ಯವಾದ ಸಾಮರ್ಥ್ಯವನ್ನು ಹೆಚ್ಚಿಸಲು ಪ್ರಯತ್ನಿಸುತ್ತದೆ. ಇವುಗಳು ಮಾನವ ಹಕ್ಕುಗಳನ್ನು ರಕ್ಷಿಸಲು, ಪ್ರೋತ್ಸಾಹಿಸಲು ಮತ್ತು ಅವುಗಳನ್ನು ಪೂರೈಸುವ ಧನಾತ್ಮಕ ಬದ್ಧತೆಗಳನ್ನು ಹೊಂದಿರುವುದಷ್ಟೇ ಅಲ್ಲದೆ, ಹಕ್ಕುಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವ ಬಾಧ್ಯತೆಗಳನ್ನು ಕೂಡ ಒಳಗೊಂಡಿವೆ. ಸರ್ಕಾರಗಳ ಜೊತೆಗೆ, ವ್ಯಕ್ತಿಗಳು, ಸ್ಥಳೀಯ ಸಂಸ್ಥೆಗಳು ಮತ್ತು ಅಧಿಕಾರಿಗಳು, ಖಾಸಗಿ ವಲಯ, ಮಾಧ್ಯಮಗಳು, ದಾನಿಗಳು, ಅಭಿವೃದ್ಧಿ ಪಾಲುದಾರರು ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳು ಸೇರಿದಂತೆ ಮಾನವ ಹಕ್ಕುಗಳ ಸಾಕ್ಷಾತ್ಕಾರಕ್ಕಾಗಿ ವ್ಯಾಪಕ ಶ್ರೇಣಿಯ ಇತರ ಭಾಗೀದಾರರು ಕೂಡ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಬೇಕು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಸಂಪನ್ಮೂಲಗಳು ಮತ್ತು ಸಾಮರ್ಥ್ಯಗಳ ಕೊರತೆಯನ್ನು ತುಂಬಿಸಲು ಅಂತರರಾಷ್ಟ್ರೀಯ ಸಮುದಾಯವು ಪರಿಣಾಮಕಾರಿ ಸಹಕಾರವನ್ನು ಒದಗಿಸುವ ಬಾಧ್ಯತೆಗಳನ್ನು ಹೊಂದಿದೆ. ಹಕ್ಕು-ಆಧಾರಿತ ವಿಧಾನವು ಮಾನವ ಹಕ್ಕುಗಳು ಸಾಕ್ಷಾತ್ಕಾರವಾಗುವುದನ್ನು ಖಚಿತಪಡಿಸಿಕೊಳ್ಳಲು ಕಾನೂನುಗಳು, ಆಡಳಿತಾತ್ಮಕ ಕಾರ್ಯವಿಧಾನಗಳು ಮತ್ತು ಅಗತ್ಯ ಅಭ್ಯಾಸಗಳನ್ನು ಅಭಿವೃದ್ಧಿಪಡಿಸುವ ಅಗತ್ಯವನ್ನು ಹೊಂದಿದೆ, ಹಾಗೆಯೇ ಮಾನವ ಹಕ್ಕುಗಳನ್ನು ನಿರಾಕರಿಸಿದಾಗ, ಅವುಗಳ ಉಲ್ಲಂಘನೆಯಾದಾಗ, ಅದಕ್ಕೆ ಸೂಕ್ತ ಪರಿಹಾರೋಪಾಯಗಳಿಗೆ ಕೂಡ ಅವಕಾಶ ಒದಗಿಸಬೇಕಾಗುತ್ತದೆ. ಅಷ್ಟೇ ಅಲ್ಲದೆ, ಪ್ರಗತಿಯನ್ನು ಅಳೆಯಲು ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸಲು, ಸಾರ್ವತ್ರಿಕ ಮಾನದಂಡಗಳನ್ನು ಸ್ಥಳೀಯವಾಗಿ ಬಳಸಲು ಸಾಧ್ಯವಾಗುವಂತೆ ಅವುಗಳನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ.

**ಶಿಕ್ಷಣದಲ್ಲಿ ಹಕ್ಕು-ಆಧಾರಿತ ವಿಧಾನವನ್ನು ಅಳವಡಿಸಿಕೊಳ್ಳುವುದು**

ಇಲ್ಲಿಯವರೆಗೆ ಶಿಕ್ಷಣದಲ್ಲಿ ಅಳವಡಿಸಲಾದ ಅಗತ್ಯ-ಆಧಾರಿತ ಅಭಿವೃದ್ಧಿ ವಿಧಾನಗಳು 'ಸರ್ವರಿಗೂ ಶಿಕ್ಷಣ' ಯೋಜನೆಯ ಗುರಿಗಳನ್ನು ಸಾಧಿಸಲು ವಿಫಲವಾಗಿವೆ. ಆದರೆ, ಹಕ್ಕು-ಆಧಾರಿತ ವಿಧಾನವು, ಅದು ಎಲ್ಲರನ್ನೂ ಒಳಗೊಳ್ಳುವ ಮತ್ತು ಪಾಲುದಾರಿಕೆಗೆ ಒಂದು ಸಾಮಾನ್ಯ ಅಭಿವ್ಯಕ್ತಿಯನ್ನು ಒದಗಿಸುವ ಕಾರಣಕ್ಕೆ, ಸವಾಲುಗಳು ಮತ್ತು ಒತ್ತಡಗಳ ಹೊರತಾಗಿಯೂ- ಸರ್ಕಾರಗಳು, ಪೋಷಕರು ಮತ್ತು ಮಕ್ಕಳ ಗುರಿಗಳ ಸಾಧನೆಗೆ ಕೊಡುಗೆ ನೀಡುವ ಸಾಮರ್ಥ್ಯವನ್ನು ಹೊಂದಿದೆ. ಉದಾಹರಣೆಗೆ, ಹೆಣ್ಣುಮಕ್ಕಳನ್ನು ತಾರತಮ್ಯ, ಶೋಷಣೆಯ ದುಡಿಮೆ, ದೈಹಿಕ ಹಿಂಸೆ ಮತ್ತು ಲೈಂಗಿಕ ದೌರ್ಜನ್ಯದಿಂದ ಮುಕ್ತಗೊಳಿಸಿಸಲು ಮತ್ತು ಅವರ ಜೀವನ ಮಟ್ಟವನ್ನು ಸುಧಾರಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಂಡರೆ, ಅವರ ಶಿಕ್ಷಣದ ಹಕ್ಕನ್ನು ಪರಿಣಾಮಕಾರಿಯಾಗಿ

ಜಾರಿಗೊಳಿಸಬಹುದು.[9] ಇದೇ ರೀತಿ, ಶಿಕ್ಷಣದ ಹಕ್ಕು ಇತರ ಹಕ್ಕುಗಳ ಸಾಕ್ಷಾತ್ಕಾರಕ್ಕೆ ಅತ್ಯಗತ್ಯವಾಗಿದೆ. ಉದಾಹರಣೆಗೆ, 1,000 ಮಹಿಳೆಯರಿಗೆ ಒಂದು ಹೆಚ್ಚುವರಿ ವರ್ಷದ ಶಾಲಾ ಶಿಕ್ಷಣ ದೊರಕಿದರೆ, ಎರಡು ತಾಯಂದಿರ(maternal deaths) ಮರಣವನ್ನು ತಡೆಯಬಹುದು ಎಂದು ಸಂಶೋಧನೆ ಸೂಚಿಸುತ್ತದೆ.[10]

**ಹಕ್ಕು-ಆಧಾರಿತ ವಿಧಾನವು ಸಮಾಜಕ್ಕೆ ಗಮನಾರ್ಹವಾದ ಕೊಡುಗೆ ನೀಡುವ ಸಾಮರ್ಥ್ಯಹೊಂದಿದೆ:**

- **ಸಾಮಾಜಿಕ ಒಗ್ಗಟ್ಟು, ಐಕ್ಯ ಮತ್ತು ಸ್ಥಿರತೆಯನ್ನು ಪ್ರೋತ್ಸಾಹಿಸುತ್ತದೆ:** ಮಾನವ ಹಕ್ಕುಗಳು ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಪ್ರಗತಿಯನ್ನು ಉತ್ತೇಜಿಸುತ್ತವೆ. ಮಕ್ಕಳಿಗೆ ಶಾಲಾವಕಾಶ ಇದ್ದರೂ ಕೂಡ, ಕಳಪೆ ಗುಣಮಟ್ಟದ ಶಿಕ್ಷಣವು ಅಸಮಾಧಾನಕ್ಕೆ ಕಾರಣವಾಗಬಹುದು. ಗುಣಮಟ್ಟಕ್ಕೆ ಹೆಚ್ಚಿನ ಒತ್ತು ಕೊಡುವ ಹಕ್ಕು ಆಧಾರಿತ ಶಿಕ್ಷಣ ವಿಧಾನವು, ಮಕ್ಕಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮುಕ್ತ ಅವಕಾಶ ಇರುವ ಶಾಲಾ ಪರಿಸರವನ್ನು ಬೆಳೆಸುವುದನ್ನು ಪ್ರೋತ್ಸಾಹಿಸುತ್ತದೆ. ಇದು ಕುಟುಂಬಗಳಿಗೆ ಮತ್ತು ಅವರು ವಾಸಿಸುತ್ತಿರುವ ಸಮಾಜದ ಮೌಲ್ಯಗಳಿಗೆ ಗೌರವ ಕೊಡುವುದನ್ನು ಪ್ರೋತ್ಸಾಹಿಸುತ್ತದೆ. ಇದು ಇತರ ಸಂಸ್ಕೃತಿಗಳು ಮತ್ತು ಇತರ ಸಮುದಾಯಗಳ ಜನರು ಹೆಚ್ಚಿನ ತಿಳಿವಳಿಕೆ ಬೆಳೆಸಿಕೊಳ್ಳುವುದನ್ನು ಉತ್ತೇಜಿಸುತ್ತದೆ ಮತ್ತು ತನ್ಮೂಲಕವಾಗಿ ಅಂತರ್ಸಂಸ್ಕೃತೀಯ ಕೊಡುಕೊಳ್ಳುವಿಕೆಯನ್ನು ಸಾಧ್ಯಮಾಡುತ್ತದೆ, ಸಾಂಸ್ಕೃತಿಕ ಮತ್ತು ಭಾಷಾ ವೈವಿಧ್ಯದ ಶ್ರೀಮಂತಿಕೆಯ ಬಗ್ಗೆ ನಮ್ಮಲ್ಲಿ ಅಭಿಮಾನ ಮೂಡಿಸುತ್ತದೆ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಭಾಗವಹಿಸುವ ಹಕ್ಕನ್ನು ಪ್ರೋತ್ಸಾಹಿಸುತ್ತದೆ. ಈ ರೀತಿಯಾಗಿ, ಇದು ಸಾಮಾಜಿಕ ಒಗ್ಗಟ್ಟನ್ನು ಬಲಪಡಿಸಲು ಸಹಾಯ ಮಾಡುತ್ತದೆ.
- **ಶಾಂತಿ ಮತ್ತು ಅಹಿಂಸಾತ್ಮಕ ವಿಧಾನಗಳ ಮೂಲಕ ಸಂಘರ್ಷಗಳಿಗೆ ಪರಿಹಾರ ಕಂಡುಕೊಳ್ಳುವ ಮಾರ್ಗಗಳನ್ನು ಗೌರವಿಸಿ, ಪ್ರೋತ್ಸಾಹಿಸುತ್ತದೆ:** ಹಕ್ಕು-ಆಧಾರಿತ ಶಿಕ್ಷಣ ವಿಧಾನವು ಶಾಂತಿ ಮತ್ತು ಅಹಿಂಸಾತ್ಮಕವಾದ ಸಂಘರ್ಷ ಪರಿಹಾರದ ತತ್ತ್ವಗಳ ಮೇಲೆ ಸ್ಥಾಪಿಸಲ್ಪಟ್ಟಿದೆ. ಈ ಗುರಿಯನ್ನು ಸಾಧಿಸುವಲ್ಲಿ, ಶಾಲೆಗಳು ಮತ್ತು ಸಮುದಾಯಗಳು ಮಕ್ಕಳು ಶಿಕ್ಷಕರಿಂದ ಯಾವುದೇ ರೀತಿಯ ದೈಹಿಕ, ಲೈಂಗಿಕ ಅಥವಾ ಅವಮಾನಕರ ಶಿಕ್ಷೆಗೆ ಒಳಗಾಗದೆ ಇರುವಂತಹ ಕಲಿಕಾ ವಾತಾವರಣವನ್ನು ಸೃಷ್ಟಿಸಬೇಕು, ಮತ್ತು ಅದರ ಜೊತೆಗೆ ವಿದ್ಯಾರ್ಥಿಗಳ ನಡುವೆ ಹುಟ್ಟಿಕೊಳ್ಳುವ ಎಲ್ಲ ರೀತಿಯ ಬೆದರಿಕೆ ಮತ್ತು ಆಕ್ರಮಣಶೀಲ ಪ್ರವೃತ್ತಿಯನ್ನು ಪ್ರಶ್ನಿಸುವಂತಹ ಕಲಿಕಾ ವಾತಾವರಣವನ್ನು ಸೃಷ್ಟಿಸಬೇಕು. ಇನ್ನೊಂದರ್ಥದಲ್ಲಿ ಹೇಳುವುದಾದರೆ, ಅವರು ಸಂಘರ್ಷಗಳಿಗೆ ಅಹಿಂಸಾತ್ಮಕವಾಗಿ ಪರಿಹಾರ ಕಂಡುಕೊಳ್ಳುವ ಸಂಸ್ಕೃತಿಯನ್ನು ಬೆಳೆಸಬೇಕು. ಈ ರೀತಿಯ ಶಾಲಾ-ಆಧಾರಿತ ಅನುಭವಗಳಿಂದ ಮಕ್ಕಳು ಕಲಿಯುವ ಪಾಠಗಳು ಮುಂದಕ್ಕೆ ಅವರು ಬದುಕುವ ವಿಶಾಲ ಸಮಾಜಕ್ಕೆ ಹಿತಕಾರಿಯಾದ ಕೊಡುಗೆಗಳನ್ನು ಕೊಡುತ್ತವೆ.
- **ಸಕಾರಾತ್ಮಕ ಸಾಮಾಜಿಕ ಪರಿವರ್ತನೆಗೆ ಕೊಡುಗೆ ನೀಡುತ್ತದೆ:** ಮಾನವ ಹಕ್ಕುಗಳ ಶಿಕ್ಷಣವನ್ನು ಒಳಗೊಂಡಿರುವ ಹಕ್ಕು-ಆಧಾರಿತ ಶಿಕ್ಷಣ ವಿಧಾನವು ಮಕ್ಕಳ ಮತ್ತು ಇತರ ಭಾಗೀದಾರರ ಬಲವರ್ಧನೆ ಮಾಡುತ್ತದೆ ಮತ್ತು ಅದರ ಜೊತೆಗೆ, ಸಾಮಾಜಿಕ ನ್ಯಾಯ ಮತ್ತು ಮಾನವ ಹಕ್ಕುಗಳನ್ನು ಗೌರವಿಸುವ ಸಮಾಜಗಳನ್ನು ಬೆಳೆಸುವಲ್ಲಿ ಅಗತ್ಯವಾದ ಸಾಮಾಜಿಕ ಪರಿವರ್ತನೆಯನ್ನು ಸಾಧಿಸುವ ಪ್ರಯತ್ನಗಳಲ್ಲಿ ಪ್ರಮುಖವಾದ ಅಂಶವನ್ನು ಇದು ಪ್ರತಿನಿಧಿಸುತ್ತದೆ.
- **ವೆಚ್ಚ-ಪರಿಣಾಮಕಾರಿ (**cost-effective**) ಮತ್ತು ಸುಸ್ಥಿರವೂ ಆಗಿದೆ:** ಮಕ್ಕಳನ್ನು ಘನತೆ ಮತ್ತು ಗೌರವದಿಂದ ನೋಡಿಕೊಳ್ಳುವ ಮತ್ತು ಎಲ್ಲ ಭಾಗೀದಾರರ ಕಾಳಜಿಗಳಿಗೆ ನೇರವಾಗಿ ಪ್ರತಿಕ್ರಿಯಿಸುವಂತಹ, ಎಲ್ಲರನ್ನೂ ಒಳಗೊಳ್ಳುವ, ಭಾಗೀದಾರಿ ಮತ್ತು ಜವಾಬ್ದಾರಿಯುತ ಶಿಕ್ಷಣ ವ್ಯವಸ್ಥೆಯನ್ನು ನಿರ್ಮಿಸುವುದು, ಶೈಕ್ಷಣಿಕ ಫಲಿತಾಂಶಗಳನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಹಲವಾರು ಶಾಲೆಗಳು, ಮಕ್ಕಳ ಅಗತ್ಯಗಳಿಗೆ, ಅದರಲ್ಲೂ ವಿಶೇಷವಾಗಿ ಕೆಲಸ ಮಾಡುವ ಮಕ್ಕಳ ಅಗತ್ಯಗಳಿಗೆ ಹೊಂದಿಕೊಳ್ಳಲು ವಿಫಲವಾಗುವ ಕಾರಣಕ್ಕೆ, ಶಾಲೆಯಿಂದ

ಹೊರಗುಳಿಯುವ ಮಕ್ಕಳ ಪ್ರಮಾಣ ಮತ್ತು ತರಗತಿಯಲ್ಲಿ ಅನುತ್ತೀರ್ಣರಾಗಿ ಅದೇ ತರಗತಿಯಲ್ಲಿ ಇನ್ನೊಂದು ವರ್ಷ ಕಳೆಯಬೇಕಾದ ಸನ್ನಿವೇಶ ಉಂಟಾಗುತ್ತದೆ. ಮಕ್ಕಳ ಬಳಿ ಅವರು ಚೆನ್ನಾಗಿ ಕಲಿಯಲು ಸಾಧ್ಯವಾಗದಿರುವುದಕ್ಕೆ ಮತ್ತು ಶಾಲೆಯಿಂದ ಹೊರಗುಳಿಯುವುದಕ್ಕೆ ಕಾರಣ ಕೇಳಿದಾಗ, ಅವರು ತಾವು ಶಾಲೆಯಲ್ಲಿ ಅನುಭವಿಸಿದ ಹಿಂಸೆ, ನಿಂದನೆ, ತಾರತಮ್ಯದ ವರ್ತನೆಗಳು, ಅಪ್ರಸ್ತುತ ಪಠ್ಯಕ್ರಮ ಮತ್ತು ಕಳಪೆ ಬೋಧನಾ ಗುಣಮಟ್ಟದ ಕಡೆ ಬೆರಳು ತೋರಿಸುತ್ತಾರೆ.[11] ಇಷ್ಟೇ ಅಲ್ಲದೆ, ಮಕ್ಕಳನ್ನು ಕಾಡುವ ಆರೋಗ್ಯ ಸಂಬಂಧಿ ಸಮಸ್ಯೆಗಳು ಅವರು ಶಾಲೆಗೆ ಹೋಗಲು ಮತ್ತು ವಿದ್ಯಾಭ್ಯಾಸ ಮುಂದುವರಿಸಲು ತೊಡಕಾಗುತ್ತವೆ. ಎಲ್ಲ ಮಕ್ಕಳಿಗೆ, ವಿಶೇಷವಾಗಿ ಹುಡುಗಿಯರಿಗೆ, ಸಮನ್ವಯ ಶಿಕ್ಷಣದ ಅವಕಾಶ ದೊರೆತರೆ HIV ಸೋಂಕಿನ ಅಪಾಯವನ್ನು ಕೂಡ ಕಡಮೆ ಮಾಡಬಹುದು.[12] ಆದ್ದರಿಂದ ಹಕ್ಕು-ಆಧಾರಿತ ವಿಧಾನವು ವೆಚ್ಚ-ಪರಿಣಾಮಕಾರಿಯಾಗಿರುವುದಲ್ಲದೆ, ಆರ್ಥಿಕವಾಗಿ ಕೂಡ ಲಾಭದಾಯಕವಾಗಿರುತ್ತದೆ ಮತ್ತು ಹೆಚ್ಚು ಸುಸ್ಥಿರವಾಗಿರುತ್ತದೆ.

- **ಆರ್ಥಿಕ ಅಭಿವೃದ್ಧಿಗೆ ಉತ್ತಮ ಕೊಡುಗೆಗಳನ್ನು ನೀಡುತ್ತದೆ:** ಹಕ್ಕು-ಆಧಾರಿತ ಶಿಕ್ಷಣ ವಿಧಾನವು ಆರ್ಥಿಕವಾಗಿ ಸಬಲರಾಗಿರುವ ಕಾರ್ಯಪಡೆಯನ್ನು ರೂಪಿಸುವ ಉದ್ದೇಶ ಇಟ್ಟುಕೊಂಡಿರುವ ಸರ್ಕಾರಗಳ ವಿಶಾಲ ಕಾರ್ಯಸೂಚಿಯೊಂದಿಗೆ ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ. ಸರ್ವರಿಗೂ ಶಿಕ್ಷಣದ ಅವಕಾಶವನ್ನು ದೊರಕುವಂತೆ ಮಾಡುವ ಮತ್ತು ಹೆಣ್ಣುಮಕ್ಕಳು, ವಿಶೇಷ ಆವಶ್ಯಕತೆ ಇರುವ ಮಕ್ಕಳು, ಬಾಲ ಕಾರ್ಮಿಕರು, ಗ್ರಾಮೀಣ ಸಮುದಾಯಗಳಲ್ಲಿನ ಮಕ್ಕಳು, ಅಲ್ಪಸಂಖ್ಯಾತ ಮತ್ತು ಮೂಲನಿವಾಸಿಗಳ ಮಕ್ಕಳ ವಿರುದ್ಧದ ತಾರತಮ್ಯವನ್ನು ನಿವಾರಿಸುವ ಕ್ರಮಗಳು ಸಮಾಜದ ಆರ್ಥಿಕ ನೆಲೆಯನ್ನು ವಿಸ್ತರಿಸಲು ಸಹಾಯ ಮಾಡುತ್ತವೆ ಮತ್ತು ತನ್ಮೂಲಕವಾಗಿ ದೇಶದ ಆರ್ಥಿಕ ಸಾಮರ್ಥ್ಯವನ್ನು ವೃದ್ಧಿಸುತ್ತವೆ.
- **ಸಾಮರ್ಥ್ಯವರ್ಧನೆ:** ಸಾಮರ್ಥ್ಯ-ವರ್ಧನೆ ಮತ್ತು ಸಬಲೀಕರಣದ ಮೇಲೆ ಗಮನ ಕೇಂದ್ರೀಕರಿಸುವ ಮೂಲಕ, ಶಿಕ್ಷಣದ ಹಕ್ಕು-ಆಧಾರಿತ ವಿಧಾನವು, ಸರ್ಕಾರಗಳು ತಮ್ಮ ಜವಾಬ್ದಾರಿಗಳನ್ನು ಪೂರೈಸುವ ಮತ್ತು ಜನರು ತಮ್ಮ ಹಕ್ಕುಗಳನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುತ್ತದೆ.

**ಸರ್ಕಾರಿ ಆಡಳಿತಕ್ಕೆ ಸಂಬಂಧಿಸಿದ ನೀತಿ ನಿರೂಪಣೆಯ ಸಂದರ್ಭದಲ್ಲಿ ಮತ್ತು ಸರ್ಕಾರಿ ಯೋಜನೆಗಳಲ್ಲಿ ಹಕ್ಕು-ಆಧಾರಿತ ವಿಧಾನವನ್ನು ಅನ್ವಯಿಸುವುದು**

ವಿಶ್ವಸಂಸ್ಥೆಯ ಸಾಮಾನ್ಯ ತಿಳಿವಳಿಕೆಯ ಹೇಳಿಕೆ(UN Statement of Common Understanding)ಯು, ಪರಸ್ಪರ ದೇಶಗಳ ನಡುವೆ ಅಭಿವೃದ್ಧಿ ಯೋಜನೆಗಳಿಗೆ ಸಹಕಾರ ಕೊಡುವ ಸಂದರ್ಭದಲ್ಲಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಹಕ್ಕು-ಆಧಾರಿತ ವಿಧಾನವನ್ನು ಹೇಗೆ ಅಳವಡಿಸಿಕೊಳ್ಳುವುದು ಎಂಬುದನ್ನು ವಿವರಿಸುತ್ತದೆ. ಅದು ಅಭಿವೃದ್ಧಿ ಸಹಕಾರದ ಎಲ್ಲ ಕಾರ್ಯಕ್ರಮಗಳು, ನೀತಿಗಳು ಮತ್ತು ತಾಂತ್ರಿಕ ಸಹಾಯದ ಎಲ್ಲ ಕಾರ್ಯಕ್ರಮಗಳು ಮಾನವ ಹಕ್ಕುಗಳ ಸಾಕ್ಷಾತ್ಕಾರವನ್ನು ಮತ್ತಷ್ಟು ಹೆಚ್ಚಿಸಬೇಕು ಎಂಬುದನ್ನು ಒತ್ತಿಹೇಳುತ್ತದೆ ಮತ್ತು ಈ ಕಾರ್ಯಕ್ರಮಗಳ ಪ್ರಕ್ರಿಯೆಯ ಎಲ್ಲ ಹಂತಗಳಲ್ಲಿ ಮಾನವ ಹಕ್ಕುಗಳ ಮೂಲತತ್ತ್ವಗಳು ಮತ್ತು ಮಾನದಂಡಗಳು ಮಾರ್ಗದರ್ಶಕವಾಗಿರಬೇಕು ಎಂದು ಹೇಳುತ್ತದೆ. ಈ ಕೆಳಗಿನ ಅಂಶಗಳು ಹಕ್ಕು-ಆಧಾರಿತ ವಿಧಾನಕ್ಕೆ ಅಗತ್ಯವೂ, ನಿರ್ದಿಷ್ಟವೂ ಮತ್ತು ಅನನ್ಯವೂ ಆಗಿದ್ದು, ಅವುಗಳನ್ನು ಶಿಕ್ಷಣ ಕ್ಷೇತ್ರದ ನೀತಿ ನಿರೂಪಣೆ ಮತ್ತು ಕಾರ್ಯಕ್ರಮ ಯೋಜನೆಗಳಲ್ಲಿ ಬಳಸಬಹುದು:

• ಮೌಲ್ಯಮಾಪನ ಮತ್ತು ವಿಶ್ಲೇಷಣೆಯು ಶಿಕ್ಷಣದಲ್ಲಿ ಮಾನವ ಹಕ್ಕುಗಳ ಪ್ರಾಮುಖ್ಯವನ್ನು ಮತ್ತು ಅದಕ್ಕೆ ಸರ್ಕಾರಗಳು ಹೊಂದಿರಬೇಕಾದ ಬದ್ಧತೆಗಳನ್ನು ಮತ್ತು ಅವುಗಳನ್ನು ಸಾಕ್ಷಾತ್ಕಾರಗೊಳಿಸದಿರಲು ಕಾರಣವಾಗುವ ತತ್ ಕ್ಷಣದ ಮತ್ತು ವ್ಯವಸ್ಥೆಯ ರಚನೆಯಲ್ಲಿ ಹುದುಗಿರುವ ಕಾರಣಗಳನ್ನು ಗುರುತಿಸುತ್ತದೆ.

• ಕಾರ್ಯಕ್ರಮಗಳು ವ್ಯಕ್ತಿಗಳಿಗೆ ತಮ್ಮ ಹಕ್ಕುಗಳನ್ನು ಪಡೆಯಲು ಇರುವ ಸಾಮರ್ಥ್ಯ ಮತ್ತು ಸರ್ಕಾರಗಳಿಗೆ ತಮ್ಮ ಜವಾಬ್ದಾರಿಗಳನ್ನು ಪೂರೈಸಲು ಇರುವ ಸಾಮರ್ಥ್ಯವನ್ನು ಅಳೆಯುತ್ತವೆ. ಅನಂತರ ಅವುಗಳನ್ನು ಬೆಳೆಸಲು ಅಗತ್ಯವಾದ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.

• ಕಾರ್ಯಕ್ರಮಗಳು ಫಲಿತಾಂಶಗಳು ಮತ್ತು ಪ್ರಕ್ರಿಯೆಗಳೆರಡನ್ನೂ ಮಾನವ ಹಕ್ಕುಗಳ ಮಾನದಂಡಗಳು ಮತ್ತು ತತ್ತ್ವಗಳ ಆಧಾರದ ಮೆಲೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುತ್ತವೆ.

• ಕಾರ್ಯಕ್ರಮಗಳನ್ನು ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆಗಳು ಸೂಚಿಸುವ ಶಿಫಾರಸುಗಳು ಮತ್ತು ಕಾರ್ಯತಂತ್ರಗಳ ಆಧಾರದ ಮೇಲೆ ಅಭಿವೃದ್ಧಿಪಡಿಸಲಾಗುತ್ತದೆ.

ಇದರ ಜೊತೆಗೆ, ಕಾರ್ಯಕ್ರಮ ಯೋಜನೆಗಳಲ್ಲಿ ಅಳವಡಿಸಿಕೊಳ್ಳಬೇಕಾದ ಹಲವು ಉತ್ತಮ ಅಭ್ಯಾಸಗಳು ಹಕ್ಕು-ಆಧಾರಿತ ವಿಧಾನದಲ್ಲಿ ಕೂಡ ಅತ್ಯಗತ್ಯವಾಗುತ್ತವೆ. ಒಟ್ಟಂದದಲ್ಲಿ, ಅಗತ್ಯವಾಗಿ ಕೈಗೊಳ್ಳಬೇಕಾದ ಹಂತಗಳು:

• ಪರಿಸ್ಥಿತಿಯ ಮೌಲ್ಯಮಾಪನ ಮತ್ತು ವಿಶ್ಲೇಷಣೆ.

• ಅನುಷ್ಠಾನಕ್ಕೆ ಅಗತ್ಯವಿರುವ ಮತ್ತು ಲಭ್ಯವಿರುವ ಸಾಮರ್ಥ್ಯದ ಮೌಲ್ಯಮಾಪನ.

• ಕಾರ್ಯಕ್ರಮದ ಯೋಜನೆ, ವಿನ್ಯಾಸ ಮತ್ತು ಅನುಷ್ಠಾನ.

• ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

## 14. ಸರ್ವರಿಗೂ ಶಿಕ್ಷಣ ಯೋಜನೆಯಲ್ಲಿ ಮಾನವ ಹಕ್ಕು-ಆಧಾರಿತ ವಿಧಾನದ ಅಳವಡಿಕೆ

**'ಉತ್ತಮ ಕಾರ್ಯಕ್ರಮ ಯೋಜನೆ'ಯನ್ನು ಇನ್ನೂ ಉತ್ತಮಗೊಳಿಸುವುದು ಹೇಗೆ?**

- ಒಂದು ಉತ್ತಮ ಕಾರ್ಯಕ್ರಮ ಯೋಜನೆಯು 'ನಾವು ಜನರನ್ನು ಅಭಿವೃದ್ಧಿಪಡಿಸುತ್ತೇವೆ' ಎಂಬುದನ್ನು ಹೇಳಲು ಅಥವಾ ಮಾಡಲು ಸಾಧ್ಯವಿಲ್ಲ ಎಂಬ ಪ್ರಮುಖ ಅಂಶವನ್ನು ಗುರುತಿಸುತ್ತದೆ. ಜನರು ತಮ್ಮನ್ನು ತಾವೇ ಅಭಿವೃದ್ಧಿಪಡಿಸಿಕೊಳ್ಳಬೇಕು. ಆರ್ಥಿಕವಾಗಿ ಹಿಂದುಳಿದವರು, ಮಕ್ಕಳು, ಯುವಕರು ಮತ್ತು ಎಲ್ಲ ರೀತಿಯ ಕಲಿಕಾರ್ಥಿಗಳನ್ನು, ಸರಕಾರ ಒದಗಿಸುವ ಸೇವೆಗಳ ನಿಷ್ಕ್ರಿಯ ಫಲಾನುಭವಿಗಳು, ಒಂದೆಡೆಯಿಂದ ಇನ್ನೊಂದೆಡೆ ಸಾಗಿಸಬಹುದಾದ ಸರಕುಗಳು ಎಂಬ ರೀತಿಯಲ್ಲಿ ನೋಡುವುದಕ್ಕಿಂತ, ತಮ್ಮ ಕಲಿಕೆಯ, ಅಭಿವೃದ್ಧಿಯ ಸ್ವಯಂ ರೂವಾರಿಗಳು ಎಂದು ಗುರುತಿಸಬೇಕು.

- ಹಕ್ಕು-ಆಧಾರಿತ ಶಿಕ್ಷಣ ವಿಧಾನದಲ್ಲಿ, ಆರ್ಥಿಕವಾಗಿ ಹಿಂದುಳಿದವರನ್ನು ಒಳಗೊಂಡಂತೆ, ಮಕ್ಕಳು ಮತ್ತು ಇತರ ಕಲಿಕಾರ್ಥಿಗಳು ಶಿಕ್ಷಣದ ಹಕ್ಕಿನ ವಾರಸುದಾರರಾಗಿದ್ದು, ಆ ಹಕ್ಕಿನ ರಕ್ಷಣೆಯ ಹೊಣೆಗಾರಿಕೆ ಕೂಡ ಅವರದೇ ಆಗಿರುವುದರಿಂದ ಅದನ್ನು ಕೇಳಿ ಪಡೆಯುವ ಹಕ್ಕು ಅವರದಾಗಿರುತ್ತದೆ. ಆದ್ದರಿಂದ ಹಕ್ಕು-ಆಧಾರಿತ ಶಿಕ್ಷಣ ಕಾರ್ಯಕ್ರಮಗಳು ಮಕ್ಕಳು, ಯುವಜನರು, ಅವರ ಪೋಷಕರು ಮತ್ತು ಇತರ ಕಲಿಕಾರ್ಥಿಗಳು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬೇಕು. ಮಾನವ ಹಕ್ಕುಗಳ ಶಿಕ್ಷಣವು ಜನರು ತಮ್ಮ ಹಕ್ಕುಗಳು ಏನೆಂದು ಅರ್ಥಮಾಡಿಕೊಳ್ಳಲು, ಅದನ್ನು ಪಡೆಯಲು ಮತ್ತು ಅದನ್ನು ಸಾಕ್ಷಾತ್ಕರಿಸಿಕೊಳ್ಳಲು, ಅದರ ಲಾಭವನ್ನು ಪಡೆಯಲು, ಅವರ ಸಾಮರ್ಥ್ಯವರ್ಧನೆ ಮಾಡುವ ಪ್ರಮುಖ ಸಾಧನವಾಗಿದೆ.

- ಉತ್ತಮ ಕಾರ್ಯಕ್ರಮ ಯೋಜನೆಯಲ್ಲಿ, ಭಾಗವಹಿಸುವಿಕೆ ಎಂಬುದು ಒಂದು ಗುರಿಸಾಧನೆ (ಅಂತ್ಯ) ಮತ್ತು ಗುರಿಸಾಧನೆಯ ಒಂದು ಸಾಧನವಾಗಿ, ಎರಡೂ ರೂಪದಲ್ಲೂ ನಿರ್ಣಾಯಕವಾಗಿದೆ. ಭಾಗವಹಿಸುವಿಕೆ ಎಂದರೆ '*ಅವರು*' - '*ನಮ್ಮ*' ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ ಎಂದಲ್ಲ, ಬದಲಿಗೆ, 'ನಾವೆಲ್ಲರೂ ಒಟ್ಟಾಗಿ ಗುರುತಿಸಿದ ಕಲಿಕಾ ಅಗತ್ಯಗಳನ್ನು ಒಟ್ಟಾಗಿ ಭಾಗವಹಿಸಿ ಪೂರೈಸುತ್ತೇವೆ,' ಎಂದರ್ಥ.

- ಮಕ್ಕಳು ಮತ್ತು ಮಹಿಳೆಯರ ಭಾಗವಹಿಸುವಿಕೆ ಸೇರಿದಂತೆ, ಎಲ್ಲ ಭಾಗೀದಾರರ ಭಾಗವಹಿಸುವಿಕೆಯು ಅನೇಕ ಒಡಂಬಡಿಕೆಗಳಲ್ಲಿ ಮಾನ್ಯಮಾಡಲಾದ ಮಾನವ ಹಕ್ಕಾಗಿದೆ. ಹಕ್ಕು-ಆಧಾರಿತ ಶಿಕ್ಷಣ ವಿಧಾನದಲ್ಲಿ, ಭಾಗವಹಿಸುವಿಕೆಯು ಆವಶ್ಯಕ ಪ್ರಕ್ರಿಯೆಯಾಗಿಯೂ, ಹಾಗೆಯೇ ಫಲಿತಾಂಶವಾಗಿಯೂ ಕೆಲಸ ಮಾಡುತ್ತದೆ.

- ಒಂದು ಉತ್ತಮ ಕಾರ್ಯಕ್ರಮ ಯೋಜನೆಯಲ್ಲಿ ಭಾಗೀದಾರರ ಸಬಲೀಕರಣವು ಮುಖ್ಯ ಅಂಶವಾಗಿದೆ, ಆದರೆ ಅದನ್ನು ಒಂದು ತಂತ್ರವಾಗಿ ಮಾತ್ರ ನೋಡುವುದಲ್ಲ. ಅದು ಯಾವುದೇ ಕಾರ್ಯತಂತ್ರದ ಒಂದು ಅಂಶ ಮಾತ್ರ ಆಗಿರಬಹುದು, ಉದಾಹರಣೆಗೆ ವಕಾಲತ್ತು (advocacy), ಸಾಮರ್ಥ್ಯ-ವರ್ಧನೆ ಅಥವಾ ಸೇವಾ ವಿತರಣೆ

  ವ್ಯಕ್ತಿಯ ಘನತೆ ಮತ್ತು ಗೌರವವನ್ನು ತನ್ನ ಅಂತರ್ಯದಲ್ಲಿಟ್ಟುಕೊಂಡಿರುವ ಹಕ್ಕು-ಆಧಾರಿತ ವಿಧಾನವು, ಸಬಲೀಕರಣವು ಒಂದು ಅಗತ್ಯವಾದ ಕಾರ್ಯತಂತ್ರವಷ್ಟೆ ಅಲ್ಲ, ಅದು ಒಂದು ಗುರಿ ಕೂಡ ಎಂಬುದನ್ನು ಒಪ್ಪಿಕೊಳ್ಳುತ್ತದೆ. ಔಪಚಾರಿಕ ಮತ್ತು ಅನೌಪಚಾರಿಕ ನ್ಯಾಯ ಕಾರ್ಯವಿಧಾನ (justice mechanisms)ಗಳ ಮೂಲಕ ಕುಂದುಕೊರತೆಗಳಿಗೆ ಪರಿಹಾರಗಳನ್ನು ಪಡೆಯುವ ಅವಕಾಶಗಳನ್ನು ಪ್ರೋತ್ಸಾಹಿಸಲು ಹೆಚ್ಚಿನ ಒತ್ತು ನೀಡಲಾಗುತ್ತದೆ.

- ಉತ್ತಮ ಕಾರ್ಯಯೋಜನೆಯಲ್ಲಿ, ಫಲಿತಾಂಶ ಮತ್ತು ಪ್ರಕ್ರಿಯೆಗಳ ಮೇಲ್ವಿಚಾರಣೆ, ಹಾಗೆಯೇ ಶಿಕ್ಷಣದ ಎಲ್ಲ ಹಂತಗಳಲ್ಲಿ ಸಮರ್ಪಕವಾದ ಮಾಹಿತಿಯನ್ನು ಬಳಸಿ ನಿರ್ಧಾರ ತೆಗೆದುಕೊಳ್ಳುವುದು ಬಹಳ ಮುಖ್ಯ.
  ಹಕ್ಕು-ಆಧಾರಿತ ವಿಧಾನವು ಶಿಕ್ಷಣದ ಹಕ್ಕನ್ನು ಎತ್ತಿಹಿಡಿಯುವ, ಗೌರವಿಸುವ ಮತ್ತು ರಕ್ಷಿಸುವ ಕರ್ತವ್ಯಗಳನ್ನು ನಿರ್ವಹಿಸಲು ನಿಯೋಜಿಸಲಾದ ವ್ಯಕ್ತಿಗಳಿಂದ ಹೊಣೆಗಾರಿಕೆಯನ್ನು ನಿರೀಕ್ಷಿಸುತ್ತದೆ.
- ಉತ್ತಮ ಕಾರ್ಯಯೋಜನೆಯಲ್ಲಿ, ಶಿಕ್ಷಣ ಕಾರ್ಯಕ್ರಮಗಳ ಅಭಿವೃದ್ಧಿ ಮತ್ತು ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಭಾಗೀದಾರರ ವಿಶ್ಲೇಷಣೆಯು ತುಂಬ ಉಪಯುಕ್ತವಾಗಿದೆ ಏಕೆಂದರೆ ಇದು ಸಮುದಾಯ ಮತ್ತು ಸಮಾಜದಲ್ಲಿ ಸ್ಪಷ್ಟವಾದ ಹೊಣೆಗಾರಿಕೆಗಳನ್ನು ಗುರುತಿಸುತ್ತದೆ.

ಶಿಕ್ಷಣದಲ್ಲಿ ಹೆಚ್ಚಿನ ಪಾಲುದಾರರು ಅದರ ಕರ್ತವ್ಯ ಪಾಲಕರು ಕೂಡ ಆಗಿರುತ್ತಾರೆ. ಹಕ್ಕು-ಆಧಾರಿತ ವಿಧಾನದಲ್ಲಿನ ಒಂದು ಪ್ರಮುಖ ತಂತ್ರ, ಹಕ್ಕುದಾರರು ಮತ್ತು ಕರ್ತವ್ಯಧಾರಕರ ನಡುವಿನ ಪ್ರಮುಖ ಸಂಬಂಧಗಳನ್ನು ಗುರುತಿಸುವುದು. ಇದು ಭಾಗಿದಾರರ ವಿಶ್ಲೇಷಣೆಯ ಮಾದರಿಯನ್ನು ಹೋಲುತ್ತಿದ್ದರೂ, ಅದಕ್ಕಿಂತ ಹೆಚ್ಚಿನ ವ್ಯಾಪ್ತಿಯನ್ನು ಹೊಂದಿದೆ.

## ಮಾನವ ಹಕ್ಕುಗಳ ಆಧಾರಿತ ವಿಧಾನದಿಂದ

ಹಕ್ಕುಗಳು ಮತ್ತು ಕರ್ತವ್ಯಗಳ ನಡುವಿನ ಸಂಬಂಧವು ಸ್ಪಷ್ಟ ಹೊಣೆಗಾರಿಕೆಗಳನ್ನು ಹೊಂದಿದೆ - ಮಾನವ ಹಕ್ಕುಗಳ ಒಡಂಬಡಿಕೆಗಳಲ್ಲಿ ಸೂಚಿಸಲಾದ ಬದ್ಧತೆ(commitments)ಗಳು ಮನುಷ್ಯ ಸಹಜವಾದ ಅರ್ಹತೆಗಳೇ ಹೊರತು, ಅವನಿಗೆ/ಅವಳಿಗೆ ಯಾರೇ ಕೊಡಮಾಡುವ ಭರವಸೆಗಳಾಗಲಿ, ದಾನವಾಗಲಿ ಅಲ್ಲ. ಹಾಗಾಗಿ ಅಭಿವೃದ್ಧಿಯ ನೆರವು ಕೂಡ ಈ ಅಂತಾರಾಷ್ಟ್ರೀಯ ಬಾಧ್ಯತೆಗಳ ಮೇಲೆ ನಿರ್ಭರವಾಗಿರಬೇಕು.

- ಒಂದು ಉತ್ತಮ ಕಾರ್ಯಕ್ರಮದಲ್ಲಿ, ಶೈಕ್ಷಣಿಕ ಕಾರ್ಯಕ್ರಮಗಳು ದುರ್ಬಲ ವರ್ಗದವರನ್ನು ಕೇಂದ್ರವಾಗಿಟ್ಟುಕೊಂಡು, ಮಕ್ಕಳು, ಮತ್ತಿತರರ ಮೂಲಭೂತ ಅಗತ್ಯಗಳಿಗೆ ಸ್ಪಂದಿಸಬೇಕು. ಸ್ಥಳೀಯ ಉತ್ತರದಾಯಿತ್ವವು ಮುಖ್ಯವಾಗಿದ್ದು, ಬಾಹ್ಯ ಅಭಿವೃದ್ಧಿ ಬೆಂಬಲವನ್ನು ಯಾವಾಗಲೂ ಅಸ್ತಿತ್ವದಲ್ಲಿರುವ ಸಾಮರ್ಥ್ಯಗಳ ಆಧಾರದ ಮೇಲೆ ನಿರ್ಮಿಸಬೇಕು. ಎಲ್ಲ ಶಿಕ್ಷಣ ಅಭಿವೃದ್ಧಿ ಪ್ರಯತ್ನಗಳಲ್ಲಿ ಬಡತನ ನಿರ್ಮೂಲನೆ ಮತ್ತು ಅಸಮಾನತೆಯನ್ನು ತೊಡೆದುಹಾಕುವುದು ದೀರ್ಘಾವಧಿಯ ಗುರಿಗಳಾಗಿರಬೇಕು.

ಶಿಕ್ಷಣ ಕಾರ್ಯಕ್ರಮಗಳು ಅಗತ್ಯಕ್ಕೆ ಸ್ಪಂದಿಸಬೇಕಾಗಿರುವುದಷ್ಟೇ ಅಲ್ಲದೆ, ಮಕ್ಕಳು, ಯುವಜನರು ಮತ್ತು ಇತರ ಕಲಿಕಾರ್ಥಿಗಳ ಹಕ್ಕುಗಳನ್ನು ಸಹ ಗಣನೆಗೆ ತೆಗೆದುಕೊಳ್ಳಬೇಕು. ಶಿಕ್ಷಣದ ಭಾಗೀದಾರರು ಶಿಕ್ಷಣ ಕಾರ್ಯಕ್ರಮಗಳ ಉತ್ತರದಾಯಿತ್ವವನ್ನು ಒಂದು ಹಕ್ಕಾಗಿ ಪರಿಗಣಿಸಬೇಕೇ ವಿನಾ ಒಂದು ಆಯ್ಕೆಯಾಗಿ ಅಲ್ಲ. ಶಿಕ್ಷಣದ ಹಕ್ಕು ಅಸಮಾನತೆ ಮತ್ತು ಬಡತನವನ್ನು ಕಡಮೆ ಮಾಡುವ ಸಾಧನವಾಗಿದೆ. ಆದ್ದರಿಂದ ಶೈಕ್ಷಣಿಕ ಕಾರ್ಯಕ್ರಮಗಳು, ಅದರ ಉದ್ದೇಶಿತ ಕ್ರಮಗಳು ಯಾವ ರೀತಿಯಾಗಿ ಅಸಮಾನತೆಗಳನ್ನು ಕಡಮೆ ಮಾಡಬಲ್ಲವು ಮತ್ತು ಯಾವ ರೀತಿಯಾಗಿ ಬಡತನ ಮತ್ತು ಅನ್ಯಾಯವನ್ನು ತೊಡೆದುಹಾಕುವಲ್ಲಿ ಪಾತ್ರವಹಿಸುತ್ತವೆ ಎಂಬುದನ್ನು ಸ್ಪಷ್ಟಪಡಿಸಬೇಕು. ಇದು ಸಾಂಸ್ಥಿಕ ಮತ್ತು ಕಾನೂನು ಸುಧಾರಣೆ ಎರಡನ್ನೂ ಒಳಗೊಂಡಿರಬಹುದು. ಮಾನವ ಹಕ್ಕುಗಳ ಮಾನದಂಡಗಳು ಬದಲಾವಣೆಯ ಬೇಡಿಕೆಯ ಸಮರ್ಥನೆಗಾಗಿ ಅಗತ್ಯವಾದ ಸಾಧನಗಳು ಮತ್ತು ಅದಕ್ಕೆ ಅಗತ್ಯವಾದ ನ್ಯಾಯಸಮ್ಮತತೆಯನ್ನು ಒದಗಿಸುತ್ತವೆ.

- ಉತ್ತಮ ಕಾರ್ಯಕ್ರಮ ಯೋಜನೆಯಲ್ಲಿ, ಶೈಕ್ಷಣಿಕ ಕಾರ್ಯಕ್ರಮಗಳನ್ನು ಈ ಕ್ಷೇತ್ರದಲ್ಲಿನ ಸಮಸ್ಯೆಗಳನ್ನು ಗುರುತಿಸಿ, ಅವುಗಳನ್ನು ಆದ್ಯತೆಗನುಸಾರವಾಗಿ ಪಟ್ಟಿಮಾಡಬೇಕು ಮತ್ತು ಈ ಸಮಸ್ಯೆಗಳ ಮೂಲಭೂತ ಮತ್ತು ತತ್ ಕ್ಷಣದ ಕಾರಣಗಳನ್ನು ಗುರುತಿಸಿ, ಪರಿಸ್ಥಿತಿ ವಿಶ್ಲೇಷಣೆ(situation analysis) ವಿಧಾನದ ಮೂಲಕ ಅಭಿವೃದ್ಧಿಪಡಿಸಬೇಕು ಮತ್ತು ತನ್ಮೂಲಕವಾಗಿ ಅದಕ್ಕೆ ಏಕಕಾಲದಲ್ಲಿ ಅಥವಾ ಅನುಕ್ರಮವಾಗಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕು.

ಹಕ್ಕು-ಆಧಾರಿತ ಶಿಕ್ಷಣ ವಿಧಾನವು ಬಡತನ ಮತ್ತು ಅಸಮಾನತೆಗೆ ಕಾರಣವಾಗಿರುವ ಅಂಶಗಳನ್ನು ಗುರುತಿಸಿ, ಅದನ್ನು ಪರಿಹರಿಸುವ ಅಗತ್ಯವನ್ನು ಮನಗಾಣುತ್ತದೆ. ಮಾನವ ಹಕ್ಕುಗಳ ಅವಿಭಾಜ್ಯತೆ(indivisibility of human rights)ಯು ಈ ಕಾರಣಗಳಿಗೆ ಎಲ್ಲ ಹಂತಗಳಲ್ಲಿ ಏಕಪ್ರಕಾರವಾಗಿ, ಏಕಕಾಲಕ್ಕೆ ಗಮನಹರಿಸುವ ಅಗತ್ಯವನ್ನು ಒತ್ತಿಹೇಳುತ್ತದೆ.

- ಉತ್ತಮ ಕಾರ್ಯಕ್ರಮ ಯೋಜನೆಯಲ್ಲಿ, ಗುರಿಗಳನ್ನು ನಿರ್ಧರಿಸುವುದು ಮುಖ್ಯವಾಗಿದೆ ಮತ್ತು ಅದರ ಜೊತೆಗೆ ಕಾರ್ಯಕ್ರಮದ ವ್ಯಾಪ್ತಿಯ ವಿಸ್ತರಣೆಯ ಅಗತ್ಯವನ್ನು ಕೂಡ ಯೋಜನಾ ಹಂತದಲ್ಲಿಯೇ ಪರಿಗಣಿಸಲಾಗುತ್ತದೆ. ಸಕಾರಾತ್ಮಕ ಬದಲಾವಣೆಗಳ ಸುಸ್ಥಿರತೆಯನ್ನು, ನಿರಂತರತೆಯನ್ನು ಕಾಪಾಡಿಕೊಳ್ಳುವಂತಹ ಪ್ರಯತ್ನಗಳನ್ನು ಕೈಗೊಳ್ಳಬೇಕಾಗುತ್ತದೆ. ಇದು ಪರಿಸರದ ಸುಸ್ಥಿರತೆಯನ್ನು ಕಾಪಾಡಿಕೊಳ್ಳುವುದನ್ನು ಕೂಡ ಒಳಗೊಂಡಿದೆ.

  ಹಕ್ಕು-ಆಧಾರಿತ ಶಿಕ್ಷಣದ ಸಾಕ್ಷಾತ್ಕಾರವು ನಿರೀಕ್ಷಿತ ಫಲಿತಾಂಶಗಳ ಸಾಧನೆ ಮತ್ತು ಅವುಗಳನ್ನು ಮಾನವ ಹಕ್ಕುಗಳ ಮೌಲ್ಯಗಳನ್ನು ಪ್ರತಿಬಿಂಬಿಸುವ ಪ್ರಕ್ರಿಯೆಯ ಮೂಲಕ ಸಾಧಿಸುವುದರ ಅಗತ್ಯವನ್ನು ಒಳಗೊಂಡಿದೆ. ಹಕ್ಕು-ಆಧಾರಿತ ಶಿಕ್ಷಣ ವಿಧಾನದಲ್ಲಿ ಫಲಿತಾಂಶಗಳು ಮತ್ತು ಪ್ರಕ್ರಿಯೆಗಳಿಗೆ ನಾವು ಒಟ್ಟಾಗಿ, ಏಕಕಾಲಕ್ಕೆ ಗಮನ ಕೊಡಬೇಕಾಗುತ್ತದೆ. ಸೇವಾ ವಿತರಣೆ ಮಾದರಿಯ ಮನೋಧೋರಣೆಯಿಂದ ನಾವು ಗಮನವನ್ನು ಸಾಮರ್ಥ್ಯ ಅಭಿವೃದ್ಧಿ ಮತ್ತು ವಕಾಲತ್ತು (capacity development and advocacy) ಕಡೆಗೆ ಬದಲಾಯಿಸಬೇಕಾದ ಅಗತ್ಯವಿದೆ.

ಮೂಲ: Adapted from Jonsson, Urban, A Human Rights Approach to Development Programming, United Nations Children's Fund, New York, 2003, pp. 39–41.

## 16. 'ಸರ್ವರಿಗೂ ಶಿಕ್ಷಣ' ಯೋಜನೆಯಲ್ಲಿ ಮಾನವ ಹಕ್ಕು-ಆಧಾರಿತ ವಿಧಾನದ ಅಳವಡಿಕೆ

**ಪರಿಸ್ಥಿತಿಯ ಮೌಲ್ಯಮಾಪನ ಮತ್ತು ವಿಶ್ಲೇಷಣೆ**

ಪರಿಸ್ಥಿತಿಯ ವಿಶ್ಲೇಷಣೆಯಲ್ಲಿ ಅಭಿವೃದ್ಧಿ ಆಧಾರಿತ ವಿಧಾನವು, ಅಪಾಯಗಳು, ಅಧಿಕಾರ, ಭಾಗೀದಾರರು, ಮೂಲ ಕಾರಣಗಳು ಮತ್ತು ಲಿಂಗಧಾರಿತ ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ, ಕಾರ್ಯಕ್ರಮ ಯೋಜನೆಯಲ್ಲಿ ಹಕ್ಕು ಆಧಾರಿತ ವಿಧಾನಗಳು ಶಿಕ್ಷಣಕ್ಕೆ ಸಂಬಂಧಿಸಿದ ಒಡಂಬಡಿಕೆಗಳಿಗೆ ಸಹಿ ಹಾಕಿದ ಸಂಸ್ಥೆಗಳು, ಒಡಂಬಡಿಕೆಯ ಕರಡಿಗೆ ಮಾಡಿರುವ ಸಾಮಾನ್ಯ ಟಿಪ್ಪಣಿಗಳು, ಮತ್ತು ಆ ಟಿಪ್ಪಣಿಗಳನ್ನು ಪರಾಮರ್ಶಿಸಿ ಮಾಡಿದ ಅಂತಿಮ ಅವಲೋಕನಗಳು ಮತ್ತು ಅವುಗಳು ಒದಗಿಸಿದ ಮಾರ್ಗದರ್ಶನ ಒಳಗೊಂಡಂತೆ, ಸಂಬಂಧಿತ ಮಾನವ ಹಕ್ಕುಗಳ ಸಂಪೂರ್ಣ ವ್ಯಾಪ್ತಿಯನ್ನು ಒಳಗೊಳ್ಳುತ್ತವೆ. ಇದು ಕೆಳಗಿನ ಆಯಾಮಗಳನ್ನು ಒಳಗೊಳ್ಳುವ ಅಗತ್ಯವನ್ನು ಕೂಡ ಎತ್ತಿಹಿಡಿಯುತ್ತದೆ:[13]

- **ಶಾಸಕಾಂಗ, ಆಡಳಿತ ನೀತಿ ಮತ್ತು ಕಲಿಕಾ ಅಭ್ಯಾಸದ ಪರಿಸರದ ವಿಶ್ಲೇಷಣೆ**: ಶಾಸನವು ಜಾರಿಯಲ್ಲಿದ್ದರೆ ಸಾಕಾಗುವುದಿಲ್ಲ. ಎಷ್ಟೋ ಸಲ ಶಾಸನ ಅಸ್ತಿತ್ವದಲ್ಲಿರುತ್ತದೆ ಆದರೆ ಅದು ಕಾರ್ಯಗತಗೊಳ್ಳುತ್ತಿರುವುದಿಲ್ಲ. ಅಸಮರ್ಪಕ ಸಂಪನ್ಮೂಲಗಳು, ನೀತಿಯನ್ನು ಕಾರ್ಯಗತಗೊಳಿಸಲು ಇರುವ ಸಾಮರ್ಥ್ಯದ ಕೊರತೆ, ಸಾರ್ವಜನಿಕ ಬೇಡಿಕೆಯ ಕೊರತೆ ಮತ್ತು ಮಾಹಿತಿಯ ಕೊರತೆ, ಅರಿವು ಮತ್ತು ತರಬೇತಿಯ ಕೊರತೆಗಳು, ಸಂಬಂಧಿಸಿದ ಶಾಸನ ಜಾರಿಯಲ್ಲಿದ್ದರೂ, ಅದನ್ನು ನಿಷ್ಪರಿಣಾಮಕಾರಿಯನ್ನಾಗಿ ಮಾಡುತ್ತದೆ ಮತ್ತು ಶಾಸನದತ್ತ ಹಕ್ಕುಗಳನ್ನು , ಅದಕ್ಕೆ ಸಂಬಂಧಿಸಿದ ಕಾನೂನುಗಳನ್ನು ಗೌರವಿಸುವ ವಾತಾವರಣವನ್ನು ನಿರ್ಮಿಸದೆ ಹೋದರೆ, ಕಾನೂನು ಉಲ್ಲಂಘನೆಯಾದ ಸಂದರ್ಭದಲ್ಲಿ ಅದಕ್ಕೆ ತಕ್ಕ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದು ಕಷ್ಟವಾಗುತ್ತದೆ.

- **ಸರ್ಕಾರಗಳ ಪ್ರಾಥಮಿಕ ಜವಾಬ್ದಾರಿಯ ಮೇಲೆ ಗಮನ**: ಶಿಕ್ಷಣಕ್ಕೆ ಸಂಬಂಧಿಸಿದಂತೆ, ಶಾಲೆಗಳ ಸ್ಥಾಪನೆ ಮತ್ತು ನಿರ್ವಹಣೆ, ಶಿಕ್ಷಕರ ನಿಯೋಜನೆ ಮತ್ತು ತರಬೇತಿ, ಪಠ್ಯಕ್ರಮ ಅಭಿವೃದ್ಧಿ, ಗುಣಮಟ್ಟದ ಮೇಲ್ವಿಚಾರಣೆ, ತಾರತಮ್ಯವನ್ನು ತೊಡೆದುಹಾಕುವುದು, ಎಲ್ಲರಿಗೂ ಸಮಾನವಾಗಿ ಶಾಲಾವಕಾಶವನ್ನು ಒದಗಿಸಿಕೊಡುವಂತಹ ಪ್ರಾಥಮಿಕ ಜವಾಬ್ದಾರಿ ಸರ್ಕಾರದ್ದಾಗಿರುತ್ತದೆ. ಇತರ ಪ್ರಮುಖ ಭಾಗೀದಾರರಾದ ಸ್ಥಳೀಯ ಅಧಿಕಾರಿಗಳು, ಶಾಲೆಗಳು, ಪೋಷಕರು ಮತ್ತು ಸಮುದಾಯಗಳು ಕೂಡ ಶಿಕ್ಷಣ ನಿರ್ವಹಣೆಯಲ್ಲಿ ತಮ್ಮ ಜವಾಬ್ದಾರಿಗಳನ್ನು ಹೊಂದಿವೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಇವುಗಳನ್ನು ಪೂರೈಸುವ ಅವರ ಸಾಮರ್ಥ್ಯಗಳು, ಸರ್ಕಾರ ತನ್ನ ಪ್ರಾಥಮಿಕ ಜವಾಬ್ದಾರಿಯನ್ನು ಪೂರೈಸುವುದರ ಮೇಲೆ ಅವಲಂಬಿಸಿರುತ್ತದೆ.

- **ಮಕ್ಕಳ ಹಕ್ಕುಗಳ ಸಮಾವೇಶದ ನಾಲ್ಕು ಮೂಲ ತತ್ತ್ವಗಳನ್ನು ಅನ್ವಯಿಸುವುದು:** ತಾರತಮ್ಯ ಮಾಡದಿರುವುದು, ಮಗುವಿನ ಹಿತಾಸಕ್ತಿ, ಜೀವಿಸುವ ಹಕ್ಕು, ಬದುಕುಳಿಯುವ ಮತ್ತು ಅಭಿವೃದ್ಧಿಹೊಂದುವ ಹಕ್ಕು, ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮತ್ತು ಅದಕ್ಕೆ ಸೂಕ್ತ ಮನ್ನಣೆಯನ್ನು ಪಡೆಯುವ ಹಕ್ಕನ್ನು ಪರಿಸ್ಥಿತಿ ವಿಶ್ಲೇಷಣೆಯ ಸಂದರ್ಭದುದ್ದಕ್ಕೂ ಕೇಂದ್ರಸ್ಥಾನದಲ್ಲಿಟ್ಟುಕೊಳ್ಳಬೇಕು.

- **ಹಕ್ಕುಗಳ ಉಲ್ಲಂಘನೆ ಮತ್ತು ನಿರಾಕರಣೆಗಳ ವಿಶ್ಲೇಷಣೆ:** ಈ ವಿಶ್ಲೇಷಣೆಯು ಹಕ್ಕುಗಳ ಉಲ್ಲಂಘನೆ ಏಕೆ ಆಗುತ್ತದೆ ಎಂಬುದಕ್ಕೆ ತತ್ ಕ್ಷಣದ, ಮತ್ತು ಮೂಲಭೂತವಾದ ಕಾರಣಗಳನ್ನು ಪರಿಗಣಿಸುವುದು ಅತ್ಯಗತ್ಯ ಮತ್ತು ಇದು ಮುಂದುವರಿದು ಶಿಕ್ಷಣಕ್ಕೆ ಅವಕಾಶ, ಶಿಕ್ಷಣದಲ್ಲಿ ಗುಣಮಟ್ಟ ಮತ್ತು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಮಕ್ಕಳ ಹಕ್ಕುಗಳ ಗೌರವವನ್ನು ಒಳಗೊಳ್ಳುತ್ತದೆ.

- **ಬಡವರು ಮತ್ತು ಅತ್ಯಂತ ದುರ್ಬಲ ವರ್ಗದ ಮೇಲೆ ಗಮನ ಕೇಂದ್ರೀಕರಿಸುವುದು:** ಈ ಗುಂಪುಗಳು ಸಾಮಾನ್ಯವಾಗಿ ಅತ್ಯಂತ ದುರ್ಬಲವಾಗಿದ್ದು, ಅವರು ತಮ್ಮ ಹಕ್ಕುಗಳ ಉಲ್ಲಂಘನೆ ಅಥವಾ ನಿರಾಕರಣೆಯ ಹೆಚ್ಚಿನ ಅಪಾಯವನ್ನು ಎದುರಿಸುತ್ತಿರುತ್ತಾರೆ.

- **ಸಹಭಾಗಿತ್ವದ ವಿಧಾನ:** ಇದು ಪರಿಸ್ಥಿತಿ ವಿಶ್ಲೇಷಣೆಯ ಸಂದರ್ಭದಲ್ಲಿ, ಪೋಷಕರು, ಶಿಕ್ಷಕರು, ಧಾರ್ಮಿಕ ಮುಖಂಡರು, ಸಮುದಾಯ ಗುಂಪುಗಳು ಮತ್ತು ಮಕ್ಕಳನ್ನು ಒಳಗೊಂಡಂತೆ ವಿಶಾಲ ವ್ಯಾಪ್ತಿಯಲ್ಲಿ ಭಾಗೀದಾರರು ತಮ್ಮ ಅಭಿಪ್ರಾಯಗಳನ್ನು, ಕೊಡುಗೆಗಳನ್ನು ಕೊಡಲು ಅವಕಾಶ ಕೊಡುವುದರ ಮೂಲಕ ಹಿಮ್ಮಾಹಿತಿಗೆ ಮತ್ತು ತೀರ್ಮಾನಗಳಿಗೆ ಬರಲು ಹೆಚ್ಚಿನ ಅವಕಾಶಗಳನ್ನು ಒದಗಿಸುತ್ತದೆ. ಮಕ್ಕಳ ದೃಷ್ಟಿಕೋನಗಳನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಳ್ಳುವುದು ಅತ್ಯಗತ್ಯ. ಸಾಧ್ಯವಾದಾಗಲೆಲ್ಲ, ವಿವಿಧ ವಯೋಮಾನದ ಹುಡುಗ, ಹುಡುಗಿಯರು, ಶಾಲೆಗೆ ಹೋಗುತ್ತಿರುವ ಮತ್ತು ಶಾಲೆಯಿಂದ ಹೊರಗುಳಿದಿರುವ, ವಿಶೇಷ ಆವಶ್ಯಕತೆಯುಳ್ಳ ಮತ್ತು ಇಲ್ಲದಿರುವ ಮತ್ತು ವಿವಿಧ ಜನಾಂಗೀಯ ಗುಂಪುಗಳು, ವಿವಿಧ ಭೌಗೋಳಿಕ ಸ್ಥಳಗಳು ಮತ್ತು ವಿಭಿನ್ನ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳ ಹಿನ್ನೆಲೆಯುಳ್ಳ ಮಕ್ಕಳ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

- **ದತ್ತಾಂಶಗಳ ವಿಂಗಡಣೆ:** ದಾಖಲಾತಿ, ಹಾಜರಾತಿ, ಶಾಲಾಭ್ಯಾಸ ಪೂರ್ಣಗೊಳಿಸುವಿಕೆ, ಶೈಕ್ಷಣಿಕ ಸಾಧನೆ ಮತ್ತು ಇತರ ಸಂಬಂಧಿತ ಅಂಶಗಳಿಗೆ ಸಂಬಂಧಿಸಿದಂತೆ ಎಲ್ಲ ವರ್ಗದ ಮಕ್ಕಳ ಗೋಚರತೆಯನ್ನು ಖಚಿತಪಡಿಸಿಕೊಳ್ಳಲು, ದತ್ತಾಂಶವನ್ನು ಲಿಂಗವಾರು, ಅಂಗವೈಕಲ್ಯ, ಜನಾಂಗ, ಜನಾಂಗೀಯ ಅಥವಾ ಸಾಮಾಜಿಕ ಮೂಲ, ಆರ್ಥಿಕ ಮೂಲ, ಧರ್ಮ, ಭಾಷೆ, ಭೌಗೋಳಿಕ ಸ್ಥಳ ಮತ್ತು ಇತರ ಸ್ಥಿತಿಗತಿಗಳ ಆಧಾರದ ಮೇಲೆ ವಿಂಗಡಿಸುವುದು ನಿರ್ಣಾಯಕವಾಗಿದೆ.

**ಅನುಷ್ಠಾನಕ್ಕೆ ಅಗತ್ಯವಾದ ಸಾಮರ್ಥ್ಯದ ಮೌಲ್ಯಮಾಪನ**

ಶಿಕ್ಷಣ ನೀತಿ ಮತ್ತು ಕಾರ್ಯಕ್ರಮ ಯೋಜನೆಗಳಲ್ಲಿ ಹಕ್ಕು-ಆಧಾರಿತ ವಿಧಾನದ ಬಳಕೆಯು ತಮ್ಮ ಹಕ್ಕುಗಳನ್ನು ಪಡೆಯಲು ಹಕ್ಕುದಾರರಿಗೆ ಇರುವ ಸಾಮರ್ಥ್ಯ ಮತ್ತು ಸರ್ಕಾರಗಳು ಮತ್ತು ಸಾರ್ವಜನಿಕ ಅಧಿಕಾರಿಗಳಿಗೆ ತಮ್ಮ ಜವಾಬ್ದಾರಿಗಳನ್ನು ಪೂರೈಸುವ ಸಾಮರ್ಥ್ಯವನ್ನು ನಿರ್ಣಯಿಸುವಲ್ಲಿ ನಿರ್ದಿಷ್ಟವಾಗಿ ಗಮನವನ್ನು ಕೇಂದ್ರೀಕರಿಸುತ್ತದೆ. ಇದು ಶಿಕ್ಷಣದ ಆದ್ಯತೆಗಳ ಅನುಷ್ಠಾನವನ್ನು ಬೆಂಬಲಿಸಲು ವ್ಯಕ್ತಿಗಳ ಸಾಮರ್ಥ್ಯವನ್ನು ಹೆಚ್ಚಿಸಲು ಅಗತ್ಯ ಯೋಜನೆಗಳು ಮತ್ತು ಚಟುವಟಿಕೆಗಳನ್ನು ಒಳಗೊಂಡಿರಬೇಕು.

**ಹಕ್ಕುಗಳ ಕೇಳಿಕೆಗಾಗಿ ಹಕ್ಕುದಾರರ ಸಾಮರ್ಥ್ಯವರ್ಧನೆ**

ತಮ್ಮ ಹಕ್ಕುಗಳ ಸಂಪೂರ್ಣ ಲಾಭಪಡೆಯಲು, ಜನರಿಗೆ ತಮ್ಮ ಹಕ್ಕುಗಳು ಯಾವುವು, ಅವು ಹೇಗೆ ಕೆಲಸ ಮಾಡುತ್ತವೆ, ಅದಕ್ಕೆ ಸಂಬಂಧಿಸಿದಂತೆ ಹೇಗೆ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತದೆ, ಯಾರು ಈ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ, ಒಂದು ವೇಳೆ ಈ ಹಕ್ಕುಗಳ ಉಲ್ಲಂಘನೆಯಾದರೆ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಲು ಇರುವ ಮಾರ್ಗೋಪಾಯಗಳು ಯಾವುವು, ಅವು ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದರ ತಿಳಿವಳಿಕೆ ಇರುವುದು ಆವಶ್ಯಕ. ಶಿಕ್ಷಕರು ನಿರಂತರವಾಗಿ ಗೈರುಹಾಜರಾಗುತ್ತಿದ್ದರೆ ಅಥವಾ ಕಲಿಸಲು ವಿಫಲರಾಗುತ್ತಿದ್ದರೆ, ಪೋಷಕರು ಮತ್ತು ಸಮುದಾಯವು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಹಕ್ಕಿದೆ ಎಂಬುದನ್ನು ತಿಳಿದುಕೊಂಡು, ಶಿಕ್ಷಕರ ಗೈರುಹಾಜರಾತಿಯಿಂದ ಉಂಟಾಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಒಟ್ಟುಗೂಡುವುದರ ಅಗತ್ಯವನ್ನು ಮನಗಾಣಬೇಕು. ಅವರಿಗೆ ಆಡಳಿತ ನೀತಿ

ನಿರೂಪಕರನ್ನು ಮತ್ತು ಮಾಧ್ಯಮದವರನ್ನು ಭೇಟಿ ಮಾಡುವ ಅವಕಾಶಗಳ ಅಗತ್ಯವಿದೆ. ತಮ್ಮ ಹಕ್ಕುಗಳನ್ನು ತಮಗೆ ಹೇಗೆ ನಿರಾಕರಿಸಲಾಗುತ್ತಿದೆ ಮತ್ತು ಅಗತ್ಯ ಬದಲಾವಣೆ ತರಲು ತಾವು ಯಾವ ರೀತಿಯಾಗಿ ತಮ್ಮ ಅಹವಾಲನ್ನು ಮಂಡಿಸಬೇಕು ಎಂಬುದನ್ನು ತಿಳಿದುಕೊಳ್ಳಲು ಅವರಿಗೆ ಬೆಂಬಲದ ಆವಶ್ಯಕತೆ ಇರುತ್ತದೆ. ಮಕ್ಕಳು ತಮ್ಮ ಹಕ್ಕುಗಳ ರಕ್ಷಣೆಯ ಅವಕಾಶಗಳನ್ನು ನಿರ್ಮಿಸುವ ಪ್ರಯತ್ನಗಳನ್ನು ಸಹ ಮಾಡಬೇಕಾಗಿದೆ. ಮಾಧ್ಯಮಗಳು, ನೀತಿ ನಿರೂಪಕರು ಮತ್ತು ರಾಜಕಾರಣಿಗಳನ್ನು ಸಂಪರ್ಕಿಸಲು ಮಕ್ಕಳಿಗೆ ಅವಕಾಶವನ್ನು ಹೆಚ್ಚಿಸುವ, ಪ್ರೋತ್ಸಾಹಿಸುವ ಸಾಧನಗಳು ಮತ್ತು ಕಾರ್ಯತಂತ್ರಗಳು ಹೆಚ್ಚುಹೆಚ್ಚಾಗಿ ಲಭ್ಯವಾಗುತ್ತಿವೆ. ಹಾಗೆಯೇ ಪರಿಣಾಮಕಾರಿ ಮಕ್ಕಳ ವಕಾಲತ್ತಿನ ಸಾಮರ್ಥ್ಯದ ಪುರಾವೆಗಳು (ಗ್ರಂಥಸೂಚಿ, ಪುಟ 102 ನೋಡಿ) ಕೂಡ ಲಭ್ಯ ಇವೆ. ಹಕ್ಕುದಾರರು ತಮ್ಮ ಹಕ್ಕುಗಳನ್ನು ಪಡೆಯಲು, ಅಗತ್ಯ ಮಾಹಿತಿಯ ಲಭ್ಯತೆ, ವಕಾಲತ್ತು ಸಾಮರ್ಥ್ಯ, ಇವುಗಳನ್ನು ನಿರ್ವಹಿಸುವಲ್ಲಿ ಒಟ್ಟು ಸಾಮರ್ಥ್ಯ-ವರ್ಧನೆ, ಪಾಲಕ ಪೋಷಕರ ಜೊತೆಗೂಡುವಿಕೆ, ಸಹಚರಿಗಳ ಬೆಂಬಲ ಮತ್ತು ತಾಂತ್ರಿಕ ನೆರವು ಸೇರಿದಂತೆ ಹಲವಾರು ತಂತ್ರಗಳ ಅಗತ್ಯವಿದೆ.

**ಜವಾಬ್ದಾರಿಗಳನ್ನು ಪೂರೈಸಲು ಸರ್ಕಾರ ಮತ್ತು ಸಾರ್ವಜನಿಕ ಅಧಿಕಾರಿಗಳ ಸಾಮರ್ಥ್ಯವರ್ಧನೆ**

ಶೈಕ್ಷಣಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ತಮ್ಮ ಜವಾಬ್ದಾರಿಗಳನ್ನು ಪೂರೈಸಲು ಸರ್ಕಾರ ಮತ್ತು ಸಾರ್ವಜನಿಕ ಅಧಿಕಾರಿಗಳ ಸಾಮರ್ಥ್ಯಗಳ ಮೌಲ್ಯಮಾಪನವು ಪ್ರಮುಖವಾಗಿದೆ. ಜವಾಬ್ದಾರಿಗಳನ್ನು ಅನುಸರಿಸಲು ಈ ಕೆಳಗಿನ ಅಡೆತಡೆಗಳು ಕಾರಣವಾಗಬಹುದು:

• **ಸಂಪನ್ಮೂಲಗಳ ಕೊರತೆ** - ಹಣಕಾಸು (ತೆರಿಗೆ ಆಧಾರ ಅಥವಾ ಬಜೆಟ್ ಆದ್ಯತೆಗಳು) ಅಥವಾ ಮಾನವ (ಕೌಶಲ್ಯಗಳು ಮತ್ತು ಸಾಂಸ್ಥಿಕ ಸಾಮರ್ಥ್ಯ).

• **ಅಧಿಕಾರದ ಕೊರತೆ** - ಕಾನೂನು, ನೈತಿಕ, ಆಧ್ಯಾತ್ಮಿಕ ಅಥವಾ ಸಾಂಸ್ಕೃತಿಕ.

• **ಜವಾಬ್ದಾರಿಯ ಕೊರತೆ** - ಬಾಧ್ಯತೆಗಳನ್ನು ಸ್ವೀಕರಿಸಲು ನಿರಾಕರಿಸುವುದು ಮತ್ತು ಜವಾಬ್ದಾರಿ ನಿರ್ವಹಿಸುವಲ್ಲಿ ಯಾವುದೇ ರಾಜಕೀಯ ಬದ್ಧತೆಯನ್ನು ಪ್ರದರ್ಶಿಸದಿರುವುದು.

• **ವಿವಿಧ ಹಂತಗಳು ಮತ್ತು ವಲಯಗಳ ನಡುವಿನ ಸಮನ್ವಯದ ಕೊರತೆ**.

• **ಅರಿವಿನ ಕೊರತೆ** - ಉದಾಹರಣೆಗೆ, ಅನಕ್ಷರಸ್ಥ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುವುದು ತಮ್ಮ ಜವಾಬ್ದಾರಿ ಎಂಬುದನ್ನು ತಿಳಿದುಕೊಂಡಿರುವುದಿಲ್ಲ.

ಬದಲಾವಣೆಯನ್ನು ಸಾಧಿಸಲು ಅಗತ್ಯವಾದ ತಂತ್ರಗಳು ಪರಿಸ್ಥಿತಿ ವಿಶ್ಲೇಷಣೆಯ ಕಾರ್ಯತಂತ್ರದಲ್ಲಿ ಅಡಕವಾಗಿವೆ. ಉದಾಹರಣೆಗೆ, ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಜವಾಬ್ದಾರಿಯನ್ನು ಪೂರೈಸುವಲ್ಲಿ ಪೋಷಕರ ಸಾಮರ್ಥ್ಯವನ್ನು ನಿರ್ಣಯಿಸಲು, ರಾಜ್ಯಗಳು ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ನೈಜ ವೆಚ್ಚಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಶಾಲಾ ಶುಲ್ಕವನ್ನು ಭರಿಸುವ ಅಗತ್ಯ ಇಲ್ಲದೆ ಇರುವುದೊಂದೇ ಪೋಷಕರ ಮೇಲಿನ ಆರ್ಥಿಕ ಹೊರೆಯನ್ನು ಕಡಮೆ ಮಾಡುವುದಿಲ್ಲ; ಸಾರ್ವತ್ರಿಕ ಶಿಕ್ಷಣದ ಗುರಿಯನ್ನು ಹೊಂದಿರುವ ನೀತಿಗಳನ್ನು ಅಭಿವೃದ್ಧಿಪಡಿಸುವಾಗ ಶಾಲಾ ಸಮವಸ್ತ್ರಗಳು, ಉಪಕರಣಗಳು ಮತ್ತು ಸಾರಿಗೆ, ಹಾಗೆಯೇ ಕೌಟುಂಬಿಕ ಬೆಂಬಲ ಅಥವಾ ಮಗುವಿನ ಗಳಿಕೆಯ ನಷ್ಟವನ್ನು ವಿಶ್ಲೇಷಣೆಯಲ್ಲಿ ಸೇರಿಸಬೇಕಾಗುತ್ತದೆ. ಬಿಕ್ಕಟ್ಟು, ಸಂಘರ್ಷ ಮತ್ತು ಸ್ಥಳಾಂತರ ಅಥವಾ ಸ್ಥಿತ್ಯಂತರದ ಸಂದರ್ಭಗಳಲ್ಲಿ ಅಡೆತಡೆಗಳು ಇನ್ನೂ ವಿಶೇಷವಾಗಿ ಕಾಡುತ್ತವೆ. ಆದಾಗ್ಯೂ, ಯುದ್ಧದಿಂದ ಹಾನಿಗೊಳಗಾದ ಪರಿಸರದಲ್ಲಿಯೂ ಸಹ ಶಿಕ್ಷಣಕ್ಕೆ ಅವಕಾಶವನ್ನು ಪಡೆದುಕೊಳ್ಳಲು ಅಥವಾ ಮರುಸ್ಥಾಪಿಸಲು ಅಗತ್ಯವಾದ ಸಾಮರ್ಥ್ಯ ಮತ್ತು ಬದ್ಧತೆಯನ್ನು ಬೆಳೆಸುವುದು ಸಾಧ್ಯವಿದೆ.

**ಕಾರ್ಯಕ್ರಮದ ಯೋಜನೆ, ವಿನ್ಯಾಸ ಮತ್ತು ಅನುಷ್ಠಾನ**

ಹಕ್ಕು-ಆಧಾರಿತ ಕಾರ್ಯಕ್ರಮ ವಿಧಾನವು ಅಭಿವೃದ್ಧಿಯ ಪ್ರಕ್ರಿಯೆಯು ಅದರ ಫಲಿತಾಂಶದಷ್ಟೇ ಮುಖ್ಯ ಎಂಬುದನ್ನು ಗುರುತಿಸುತ್ತದೆ. ವಾಸ್ತವವಾಗಿ, ಅಭಿವೃದ್ಧಿ ಚಟುವಟಿಕೆಗಳ ಪ್ರಕ್ರಿಯೆ ಅದರ ಫಲಿತಾಂಶದ ಮೇಲೆ ಅಪಾರ ಪರಿಣಾಮವನ್ನು ಬೀರುತ್ತದೆ. ಕಾರ್ಯಕ್ರಮಗಳ ಯೋಜನೆ, ವಿನ್ಯಾಸ ಮತ್ತು ಅನುಷ್ಠಾನದಲ್ಲಿ ಮೇಲೆ ವಿವರಿಸಿರುವ (ಪುಟ 10) ಹಕ್ಕು-ಆಧಾರಿತ ವಿಧಾನದ ತತ್ತ್ವಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಆವಶ್ಯಕ. ಅಭಿವೃದ್ಧಿ ಕಾರ್ಯಾಚರಣೆಗಳಲ್ಲಿ ಇದೆಲ್ಲವೂ ಹೊಸತಲ್ಲದಿದ್ದರೂ – ಉದಾಹರಣೆಗೆ, ಭಾಗವಹಿಸುವಿಕೆ ಮತ್ತು ಹೊಣೆಗಾರಿಕೆ, ಇದು ಉತ್ತಮ ಕಾರ್ಯಕ್ರಮ ಯೋಜನೆಯ ಮುಖ್ಯ ಲಕ್ಷಣವಾಗಿದೆ. ಇದರಿಂದಾಗಿ ಹಕ್ಕು ಆಧಾರಿತ ವಿಧಾನವು ಹೆಚ್ಚು ಮೌಲಿಕವಾಗುತ್ತದೆ ಏಕೆಂದರೆ, ಈ ತತ್ತ್ವಗಳು ನೈತಿಕ ಮತ್ತು ರಾಜಕೀಯ ಬಲವನ್ನು ಪಡೆದುಕೊಳ್ಳುತ್ತವೆ.[14] ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಹಿಂದುಳಿದಿರುವ, ಸಮಾಜದ ಅಂಚಿನಲ್ಲಿರುವ ಗುಂಪುಗಳು ಸಾಮಾನ್ಯವಾಗಿ ತಮ್ಮ ಹಕ್ಕುಗಳನ್ನು ಕೇಳಿ ಪಡೆದುಕೊಳ್ಳುವ ಸ್ಥಿತಿಯಲ್ಲಿರುವುದಿಲ್ಲವಾದರಿಂದ ಇದು ಮುಖ್ಯವಾಗುತ್ತದೆ. ಹಾಗಾಗಿ, ಈ ವಿಧಾನಗಳನ್ನು ಅನುಸರಿಸುವುದರಿಂದ ಅವರ ಬಲವರ್ಧನೆ ಹೆಚ್ಚು ಪರಿಣಾಮಕಾರಿಯಾಗುತ್ತದೆ.

**ಶಿಕ್ಷಣದಲ್ಲಿ ಹಕ್ಕು-ಆಧಾರಿತ ವಿಧಾನದ ಬಳಕೆಯು ಏನನ್ನು ಸಾಧ್ಯಮಾಡುತ್ತದೆ?**

- ಕಾರ್ಯಕ್ರಮವು ಸರ್ಕಾರದೊಂದಿಗೆ ಅದರ ಬಾಧ್ಯತೆಗಳ ಬಗ್ಗೆ ರಚನಾತ್ಮಕ ಸಂವಾದದಲ್ಲಿ ತೊಡಗಿಸಿಕೊಂಡು, ಸರ್ಕಾರವು ತನ್ನ ಬಾಧ್ಯತೆಗಳನ್ನು ಎಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದು ಎಂಬುದನ್ನು ಚರ್ಚಿಸುತ್ತದೆ, ಮತ್ತು ಇದಕ್ಕೆ ಅಗತ್ಯವಾದ ಪ್ರೋತ್ಸಾಹಕಗಳು, ತಾಂತ್ರಿಕ ಸಹಾಯ, ಜೊತೆಗೆ ಸಾಮರ್ಥ್ಯ-ವರ್ಧನೆಯ ಅಗತ್ಯಗಳನ್ನು ಸ್ಪಷ್ಟಪಡಿಸುತ್ತದೆ ಮತ್ತು ಪರಿಹಾರೋಪಾಯಗಳನ್ನು ಗುರುತಿಸಿ, ಅದರ ಅನುಷ್ಠಾನದಲ್ಲಿ ಜೊತೆಯಾಗುತ್ತದೆ.
- ಶೈಕ್ಷಣಿಕ ಅವಕಾಶಗಳನ್ನು ಪಡೆಯಲು ಶೈಕ್ಷಣಿಕ ಹಕ್ಕುದಾರರು ಶೈಕ್ಷಣಿಕ ಸ್ಥಿತಿಗತಿಯ ಮೌಲ್ಯಮಾಪನ, ನಿರ್ಧಾರ-ಮಾಡುವಿಕೆ ಮತ್ತು ಅನುಷ್ಠಾನದಲ್ಲಿ ಭಾಗಿಗಳಾಗುತ್ತಾರೆ.
- ನಕಲು ಮಾಡುವಿಕೆ(, replication), ಶಾಸಕಾಂಗ ಮತ್ತು ಆಡಳಿತ ನೀತಿಯಲ್ಲಿನ ಬದಲಾವಣೆ ಮತ್ತು ಸಂಪನ್ಮೂಲ ಹಂಚಿಕೆ, ಇತ್ಯಾದಿ ವಿಧಾನಗಳ ಮೂಲಕ, ಪುರಾವೆ ಆಧಾರಿತ ವಕಾಲತ್ತಿನ ವಿಧಾನಗಳನ್ನು ಬಳಸಿ, ಕಾರ್ಯಕ್ರಮದ ಪ್ರಭಾವದ ಪ್ರಮಾಣವನ್ನು ಹೆಚ್ಚಿಸಬಹುದಾಗಿದೆ.
- ಸರ್ಕಾರದ ಹೊಣೆಗಾರಿಕೆಯನ್ನು ಹೆಚ್ಚಿಸಲು, ಕಾರ್ಯಕ್ರಮದ ವಿನ್ಯಾಸ ಮತ್ತು ಅನುಷ್ಠಾನದಲ್ಲಿ ನಾಗರಿಕ ಸಮಾಜ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ.
- ಸಮಾಜದ ಅತ್ಯಂತ ಅಂಚಿನಲ್ಲಿರುವ ಮತ್ತು ತಾರತಮ್ಯಕ್ಕೆ ಒಳಗಾಗಿರುವ ವರ್ಗಗಳಿಗೆ ವಿಶೇಷ ಗಮನ ನೀಡಲಾಗುತ್ತದೆ. ಇದು ಬಡವರಲ್ಲಿ ಅತ್ಯಂತ ದುರ್ಬಲ ಜನರನ್ನು ಗುರುತಿಸಲು ಕೇವಲ ಬಡ ಸಮುದಾಯಗಳನ್ನು ಉದ್ದೇಶಿಸುವುದನ್ನಷ್ಟೇ ಮಾಡುವುದಲ್ಲದೆ, ಅದರ ವ್ಯಾಪ್ತಿ ಮೀರಿ, ಉದಾಹರಣೆಗೆ, ವಿಕಲಾಂಗ ಮಕ್ಕಳು, ಜಾತಿ ಶ್ರೇಣಿಗಳಲ್ಲಿ ಅತ್ಯಂತ ಕೆಳಸ್ತರದಲ್ಲಿರುವ ಮಕ್ಕಳು, ಆಂತರಿಕವಾಗಿ ಸ್ಥಳಾಂತರಗೊಂಡ ವ್ಯಕ್ತಿಗಳು ಮತ್ತು HIV ಬಾಧಿತ ಮಕ್ಕಳು - ಇವರನ್ನು ಒಳಗೊಳ್ಳುತ್ತದೆ. ಅನಂತರ ಈ ವರ್ಗವನ್ನು ತಲಪಲು ಅವರಿಗಾಗಿಯೇ ನಿರ್ದಿಷ್ಟ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಲು ಅವಕಾಶ ಕೊಡುತ್ತದೆ.
- ಎಲ್ಲ ಕಾರ್ಯಕ್ರಮದ ಚಟುವಟಿಕೆಗಳು ಸ್ಪಷ್ಟವಾಗಿ ಮಾನವ ಹಕ್ಕುಗಳ ಮಾನದಂಡಗಳಿಗೆ ಸೂಕ್ತವಾಗಿರುವಂತಿರಬೇಕು. ಅಂತಹ ಮಾನದಂಡಗಳು ಬಡ ಮತ್ತು ಅನನುಕೂಲಕರ ಗುಂಪುಗಳಿಗೆ ಕನಿಷ್ಠಪ್ರಮಾಣದಲ್ಲಾದರೂ ಖಾತರಿಗಳನ್ನು ಕೊಡಮಾಡುತ್ತವೆ. ಅವುಗಳು, ಸಮಸ್ಯೆಗಳು ಎಲ್ಲಿವೆ ಮತ್ತು ಅವುಗಳನ್ನು ಪರಿಹರಿಸಲು ಯಾವ ಸಾಮರ್ಥ್ಯಗಳು ಮತ್ತು ಕಾರ್ಯಗಳ ಅಗತ್ಯವಿದೆ ಎಂಬುದನ್ನು ಗುರುತಿಸಲು ಸಹ ಸಹಾಯ

ಮಾಡುತ್ತವೆ. ಕಾರ್ಯಕ್ರಮ ಯೋಜನಾ ಪ್ರಕ್ರಿಯೆಯಲ್ಲಿ, ಮಾನವ ಹಕ್ಕುಗಳ ಮಾನದಂಡಗಳು, ಹೆಚ್ಚು ಪರಿಣಾಮಕಾರಿ ಫಲಿತಾಂಶಗಳನ್ನು ನೀಡುವ, ವೆಚ್ಚ-ಪರಿಣಾಮಕಾರಿ ಅಭಿವೃದ್ಧಿ ಕಾರ್ಯತಂತ್ರಗಳನ್ನು ಉದ್ದೇಶಿಸಲು ಅಗತ್ಯವಿರುವ ಸಮಗ್ರ ಆದರೆ ಉದ್ದೇಶಿತ ವ್ಯಾಪ್ತಿಯನ್ನು ವಿವರಿಸಲು ಸಹಾಯ ಮಾಡುತ್ತವೆ. ಅವು ಫಲಿತಾಂಶ-ಆಧಾರಿತ ಹೊರ ಹರಿವನ್ನು ಕೂಡ ಸಾಧ್ಯಮಾಡಬಹುದು.

**ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ**

ಹಕ್ಕು-ಆಧಾರಿತ ಶೈಕ್ಷಣಿಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ವಿಧಾನವು, ಪ್ರಕ್ರಿಯೆ ಮತ್ತು ನಾವು ಏನನ್ನು ಅಳೆಯಲು ಪ್ರಯತ್ನಿಸುತ್ತದೆಯೋ ಅದಕ್ಕೆ ಸಂಬಂಧಿಸಿದಂತೆ, ನಾವು ಉತ್ತಮ ಅಭಿವೃದ್ಧಿ ಅಭ್ಯಾಸಗಳು ಎಂದು ಏನನ್ನು ಕರೆಯುತ್ತೇವೆಯೋ ಅದು ಸಾಧ್ಯಮಾಡುವುದಕ್ಕಿಂತಲೂ ಹೆಚ್ಚಿನ ಫಲಿತಾಂಶಗಳನ್ನು ಕೊಡುವ ಸಾಮರ್ಥ್ಯವನ್ನು ಹೊಂದಿದೆ.[15] ಪ್ರಕ್ರಿಯೆಗೆ ಸಂಬಂಧಿಸಿದಂತೆ, ಶೈಕ್ಷಣಿಕ ವ್ಯವಸ್ಥೆಯನ್ನು ಕುರಿತ ಮಾಹಿತಿ ಹೆಚ್ಚು ಪಾರದರ್ಶಕವಾಗಿರುವುದರ ಅಗತ್ಯವಿದೆ. ಅದರ ಜೊತೆಗೆ, ಮಕ್ಕಳು ಮತ್ತು ಅವರ ಸಮುದಾಯಗಳು ಶೈಕ್ಷಣಿಕ ಚಟುವಟಿಕೆಗಳ ವಿನ್ಯಾಸ, ವಿಶ್ಲೇಷಣೆ, ಮಾಹಿತಿ ಹಂಚಿಕೆ ಮತ್ತು ದಾಖಲೆಗಳ ಸಂಗ್ರಹ ಮಾಡುವಲ್ಲಿ ಪಾಲುದಾರರಾಗಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಆವಶ್ಯಕತೆ ಇದೆ. ಅವರ ಒಳಗೊಳ್ಳುವಿಕೆಯ ಮಾಹಿತಿಯ ಗುಣಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಅವರ ಬಲವರ್ಧನೆ ಮಾಡುತ್ತದೆ. ಇಂತಹ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಚೌಕಟ್ಟುಗಳು ಹಕ್ಕು-ಆಧಾರಿತ ಶಿಕ್ಷಣ ವಿಧಾನದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸೂಚಕಗಳನ್ನು ಹಿಡಿದಿಡಲು ಸಹಾಯ ಮಾಡುತ್ತವೆ. ಫಲಿತಾಂಶಗಳಿಗೆ ಸಂಬಂಧಿಸಿದಂತೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವು ಈ ಕೆಳಗಿನ ಅಂಶಗಳನ್ನು ಉದ್ದೇಶಿಸಬೇಕಾದ ಆವಶ್ಯಕತೆ ಇದೆ:

- ಮಕ್ಕಳ ಜೀವನದಲ್ಲಿ ಆದ ಬದಲಾವಣೆಗಳ ಆಧಾರದ ಮೇಲೆ ಅವರ ಶೈಕ್ಷಣಿಕ ಹಕ್ಕುಗಳನ್ನು ಸಾಕ್ಷಾತ್ಕರಿಸಿಕೊಳ್ಳಲಾಗಿದೆಯೇ, ಅವುಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳಲಾಗಿದೆಯೇ ಎಂಬುದನ್ನು ಅಳೆಯುವುದು.
- ಶಾಸನ, ಆಡಳಿತ ನೀತಿ, ಸರಕಾರಿ ಸಂರಚನೆಗಳು ಮತ್ತು ಅಭ್ಯಾಸಗಳಲ್ಲಿನ ಬದಲಾವಣೆಗಳು ಮತ್ತು ಅವುಗಳು ಶೈಕ್ಷಣಿಕ ಹಕ್ಕುಗಳ ಸಾಕ್ಷಾತ್ಕಾರದ ಮೇಲೆ ಬೀರುವ ಪ್ರಭಾವ.
- ಶೈಕ್ಷಣಿಕ ಅವಕಾಶ, ದೊರೆತ ಶಿಕ್ಷಣಾವಕಾಶದ ಗುಣಮಟ್ಟ ಮತ್ತು ಅದರ ಭಾಗವಾಗಿರುವ ಮಕ್ಕಳ ಅನುಭವಕ್ಕೆ ಸಂಬಂಧಿಸಿದಂತೆ ಸಮತೆ ಮತ್ತು ತಾರತಮ್ಯ ಹೋಗಲಾಡಿಸುವಲ್ಲಿ ಆದ ಬದಲಾವಣೆಗಳು. ಉದಾಹರಣೆಗೆ, ಸಮಾಜದ ಅಂಚಿನಲ್ಲಿರುವ ಹೆಚ್ಚಿನ ಮಕ್ಕಳಿಗೆ ಶಿಕ್ಷಣದ ಅವಕಾಶ ದೊರಕತೊಡಗಿದೆಯೇ ಮತ್ತು ಪಠ್ಯಕ್ರಮದಲ್ಲಿರುವ ತಾರತಮ್ಯದ ಉಲ್ಲೇಖಗಳನ್ನು ತೆಗೆದುಹಾಕಲಾಗಿದೆಯೇ?
- ಶಾಲೆಗಳಲ್ಲಿ ಮತ್ತು ಶಿಕ್ಷಣ ನೀತಿಯ ಅಭಿವೃದ್ಧಿಯ ವಿಸ್ತೃತ ಪರಿಸರದಲ್ಲಿ ಮಕ್ಕಳು ಮತ್ತು ಇತರ ಭಾಗೀದಾರರಿಗೆ ಭಾಗವಹಿಸುವಿಕೆಯ ಮತ್ತು ಸಕ್ರಿಯ ಪೌರತ್ವಕ್ಕೆ ದೊರಕುವ ಅವಕಾಶಗಳು.
- ಹಕ್ಕು-ಆಧಾರಿತ ವಿಧಾನವನ್ನು ಬೆಂಬಲಿಸಲು ನಾಗರಿಕ ಸಮಾಜ ಮತ್ತು ಸಮುದಾಯದ ಸಾಮರ್ಥ್ಯದಲ್ಲಿನ ಬದಲಾವಣೆಗಳು: ಉದಾಹರಣೆಗೆ, ಶೈಕ್ಷಣಿಕ ಗುಣಮಟ್ಟ ಉತ್ತಮಗೊಳಿಸುವ ನಿಟ್ಟಿನಲ್ಲಿ ವಕಾಲತ್ತು ವಹಿಸುವ ಮೂಲಕ, ಸ್ಥಳೀಯ ಶಾಲೆಗಳಿಗೆ ಸಕ್ರಿಯ ಬೆಂಬಲ ಮತ್ತು ಹುಡುಗಿಯರು ಮತ್ತು ಹುಡುಗರ ಸಮಾನ ಹಕ್ಕನ್ನು ಖಾತ್ರಿಪಡಿಸುವುದು (ಅನುಬಂಧ IV, ಪುಟ 122 ನೋಡಿ).

**ಶಿಕ್ಷಣದ ಹಕ್ಕನ್ನು ಸಾಕ್ಕಾತ್ಕಾರಗೊಳಿಸುವಲ್ಲಿ ಹುಟ್ಟುವ ಉದ್ವಿಗ್ನತೆಗಳನ್ನು ನಿವಾರಿಸುವುದು**

ಕಾರ್ಯಕ್ರಮ ಯೋಜನೆಯಲ್ಲಿ ಹಕ್ಕು -ಆಧಾರಿತ ವಿಧಾನದ ಅಳವಡಿಕೆಯು ಮಂತ್ರದಂಡದಂತೆ ಕೆಲಸ ಮಾಡುವುದಿಲ್ಲ. ಹಲವು ವರ್ಷಗಳಿಂದ ಪರಿಹರಿಸಲಾಗದೆ ಉಳಿದಿರುವ ಸವಾಲುಗಳಿಗೆ ಈ ವಿಧಾನ ಸರಳ ಪರಿಹಾರಗಳನ್ನು ಒದಗಿಸಲು ಸಾಧ್ಯವಿಲ್ಲ. ಹಕ್ಕು ಆಧಾರಿತ ಶಿಕ್ಷಣ ಕ್ರಮವನ್ನು ಜಾರಿಗೊಳಿಸುವಲ್ಲಿ ಅಗತ್ಯವಾದ ಒಂದು ತಾತ್ತ್ವಿಕ ಚೌಕಟ್ಟು ಮತ್ತು ವಿಧಾನವನ್ನು ಒದಗಿಸುವ ಜೊತೆಗೆ, ಇದು ವಿಭಿನ್ನ ಹಕ್ಕುಗಳ ನಡುವಿನ, ಹಕ್ಕುದಾರರ ನಡುವಿನ ಮತ್ತು ಹಕ್ಕುಗಳು ಮತ್ತು ಕರ್ತವ್ಯಗಳ ನಡುವಿನ ನೈಜ ಅಥವಾ ಒಳಗಿಂದೊಳಗೆ ಬುಸುಗುಡುವಂತಹ ಉದ್ವಿಗ್ನತೆಗಳನ್ನು ಸಹ ಬಹಿರಂಗಪಡಿಸಬಹುದು.

**ಶಿಕ್ಷಣಕ್ಕಾಗಿ ಸಂಘರ್ಷಾತ್ಮಕ ಕಾರ್ಯಸೂಚಿಗಳ ನಡುವೆ ರಾಜಿಮಾಡುವುದು**

ಶಿಕ್ಷಣದ ಗುರಿಗಳನ್ನು ಕುರಿತದ ತನ್ನ ಸಾಮಾನ್ಯ ಟಿಪ್ಪಣಿಯಲ್ಲಿ, ಮಕ್ಕಳ ಹಕ್ಕುಗಳ ಸಮಿತಿಯು, ಈ ಹಕ್ಕಿನ ಉದ್ದೇಶ, "ಮಗುವಿನ ಬೆಳವಣಿಗೆಯ ಅಗತ್ಯಗಳು ಮತ್ತು ಅದರ ವಿಭಿನ್ನ ವಿಕಸನ ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಂಡು, ಪ್ರತಿ ಮಗುವಿನಲ್ಲಿ ಸಹಜವಾದ ಮಾನವ ಘನತೆ ಮತ್ತು ಅವನ ಅಥವಾ ಅವಳ ಎಲ್ಲರಿಗೆ ಸರಿಸಮಾನವಾದ ಮತ್ತು ಕಸಿದುಕೊಳ್ಳಲಾಗದ ಹಕ್ಕುಗಳನ್ನು ರಕ್ಷಿಸುವುದು, ಬೆಂಬಲಿಸುವುದು ಮತ್ತು ಅದರ ಬಳಕೆಯನ್ನು ಉತ್ತೇಜಿಸುವುದು ಈ ಹಕ್ಕಿನ ಅನುಷ್ಠಾನದ ಅತಿಮುಖ್ಯ ಗುರಿಯಾಗಿರಬೇಕು," ಎಂದು ಒತ್ತಿಹೇಳಿದೆ. ಇದು ಮಾನವ ಹಕ್ಕುಗಳ ಬಗ್ಗೆ ಗೌರವ, ತನ್ನ ಸ್ವಂತಿಕೆ ಮತ್ತು ಇತರರೊಂದಿಗಿನ ಬಾಂಧವ್ಯದ ಬಗ್ಗೆ ಒಂದು ಸಕಾರಾತ್ಮಕವಾದ, ಸುಪ್ರಜ್ಞೆ, ಇತರರೊಂದಿಗೆ ಮತ್ತು ತಾನಿರುವ ಪರಿಸರದೊಂದಿಗೆ ಬೆರೆತು ಬಾಳುವ ಅವಕಾಶಗಳನ್ನು ಒಳಗೊಂಡಂತಹ, ಮಗುವಿನ ಸಂಪೂರ್ಣ ಸಾಮರ್ಥ್ಯದ ಸಮಗ್ರ ಬೆಳವಣಿಗೆಯ ಮೂಲಕ ಇದನ್ನು ಸಾಧಿಸಬೇಕು.[16]

ಆದರೆ ಆಚರಣೆಯಲ್ಲಿ, ಶಿಕ್ಷಣ ವ್ಯವಸ್ಥೆಗಳ ಗುರಿಗಳು ಪರಸ್ಪರ ಸ್ಪರ್ಧಾತ್ಮಕವಾದ ಕಾರ್ಯಸೂಚಿಗಳ ಸುಳಿಯಲ್ಲಿ ಸಿಲುಕಿವೆ. ಸರ್ಕಾರಗಳಿಗೆ, ಶಿಕ್ಷಣಕ್ಕೆ ಧನಸಹಾಯ ನೀಡುವಲ್ಲಿ ಎರಡು ಪ್ರಮುಖ ಗುರಿಗಳಿವೆ: ಆರ್ಥಿಕ ಕಾರ್ಯಪಡೆ ಮತ್ತು ಭವಿಷ್ಯದ ಸಂಭಾವ್ಯ ಸಂಪತ್ತನ್ನು ಅಭಿವೃದ್ಧಿಪಡಿಸುವುದು; ಮತ್ತು ಸಾಮಾಜಿಕ ಒಗ್ಗಟ್ಟು, ಐಕ್ಯ ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಉತ್ತೇಜಿಸುವುದು. ವಾಸ್ತವವಾಗಿ, 20ನೇ ಶತಮಾನದಲ್ಲಿ ನಡೆದ ಸಾರ್ವತ್ರಿಕ ಶಿಕ್ಷಣದ ಅಭಿವೃದ್ಧಿಯು ಕೈಗಾರಿಕೀಕರಣಗೊಂಡ ದೇಶಗಳು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಐಕ್ಯ ಮತ್ತು ಏಕರೂಪತೆಯನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ ಎಂದು ಗುರುತಿಸಲಾಗಿದೆ.[17] ಹಕ್ಕು-ಆಧಾರಿತ ಶಿಕ್ಷಣದ ತಿಳಿವಳಿಕೆಯು, ತರಬೇತಿ, ಮಾನವ ಬಂಡವಾಳ ಹೂಡಿಕೆ ಮತ್ತು ಯುವಜನರ ಮತ್ತು ಸಮಾಜದಲ್ಲಿನ ಅವರ ನಡವಳಿಕೆಯ ನಿಯಂತ್ರಣಕ್ಕೆ ಒತ್ತು ಕೊಡುವ, ಬಹಳ ಸಾಂಪ್ರದಾಯಿಕವಾದ ಸರ್ಕಾರಿ ದೃಷ್ಟಿಕೋನದ ಶಿಕ್ಷಣದ ಕಾರ್ಯಸೂಚಿಯನ್ನು ಮೀರಿ ಚಲಿಸುತ್ತದೆ.

ಪಾಲಕರು ಕೂಡ ಶಿಕ್ಷಣ ವ್ಯವಸ್ಥೆಯಿಂದ ಬಹಳಷ್ಟು ನಿರೀಕ್ಷಿಸುತ್ತಾರೆ. ತಮ್ಮ ಮಕ್ಕಳನ್ನು ಯಶಸ್ವಿ ಜೀವನಕ್ಕೆ ಸಜ್ಜುಗೊಳಿಸಲು ಬಯಸುವ ಪೋಷಕರು, ಶಿಕ್ಷಣವು ತಮ್ಮ ಮಕ್ಕಳಿಗೆ ಉದ್ಯೋಗವನ್ನು ಪಡೆಯಲು ಮತ್ತು ಆರ್ಥಿಕ ಯಶಸ್ಸನ್ನು ಸಾಧಿಸಲು ಅಗತ್ಯವಾದ ಜ್ಞಾನ, ಕೌಶಲ್ಯ ಮತ್ತು ಆತ್ಮವಿಶ್ವಾಸವನ್ನು ಒದಗಿಸಬೇಕೆಂದು ನಿರೀಕ್ಷಿಸುತ್ತಾರೆ. ಅದರ ಜೊತೆಗೆ, ಅವರು ತಮ್ಮ ಮೌಲ್ಯಗಳು, ಸಂಸ್ಕೃತಿ ಮತ್ತು ಭಾಷೆಯನ್ನು ತಮ್ಮ ಮಕ್ಕಳಿಗೆ ದಾಟಿಸಲು ಕೂಡ ಶಾಲೆಯ ಮೊರೆಹೋಗುತ್ತಾರೆ. ಇನ್ನೊಂದರ್ಥದಲ್ಲಿ ಹೇಳುವುದಾದರೆ, ಅವರು ತಮ್ಮ ನಂಬಿಕೆಗಳ ಬಲವರ್ಧನೆ ಮತ್ತು ಮುಂದುವರಿಕೆ ಶಾಲಾ ಶಿಕ್ಷಣದ ಮೂಲಕ ಆಗಬೇಕೆಂದು ಬಯಸುತ್ತಾರೆ.

ಶಾಲಾ ಶಿಕ್ಷಣದ ಬಗ್ಗೆ ತನ್ನದೇ ಬೇಡಿಕೆಗಳನ್ನು ಹೊಂದಿರುವ ಮೂರನೇ ವರ್ಗ ಎಂದರೆ ಮಕ್ಕಳು. ಅವರಿಗೆ ಶಾಲಾ ಶಿಕ್ಷಣದ ಮೂಲಕ ತಮ್ಮ ಆಕಾಂಕ್ಷೆಗಳನ್ನು ಪೂರೈಸಲು ಅಗತ್ಯವಾದ ಸಾಮರ್ಥ್ಯಗಳನ್ನು ಪಡೆದುಕೊಳ್ಳುವ ಗುರಿ ಇರುತ್ತದೆ. ಶಿಕ್ಷಣವು ಕುಟುಂಬದ ಹೊರಗೆ ಭಾವನಾತ್ಮಕ ಬೆಳವಣಿಗೆ ಮತ್ತು ಸ್ನೇಹದ ಅವಕಾಶವನ್ನು ಕೂಡ ಒದಗಿಸುತ್ತದೆ. ಆರ್ಥಿಕವಾಗಿ ಮತ್ತು ಸಮಾಜದ ಅಂಚಿನಲ್ಲಿರುವ ಮಕ್ಕಳು ಶಿಕ್ಷಣದ ಮೂಲಕ ಬಡತನದಿಂದ ಪಾರಾಗುವ ಮತ್ತು ಅವರ ಸಮುದಾಯಗಳಲ್ಲಿ ಸಂಪೂರ್ಣವಾಗಿ ಭಾಗವಹಿಸಲು ಇದು ಮಾರ್ಗವಾಗಿದೆ. ಶೋಷಕ ಮತ್ತು ಅಪಾಯಕಾರಿಯಾದ ಕಾರ್ಮಿಕ ಮತ್ತು ಲೈಂಗಿಕ

ಶೋಷಣೆಯಿಂದ ಮಕ್ಕಳನ್ನು ರಕ್ಷಿಸುವಲ್ಲಿ ಇದು ಪ್ರಮುಖ ಪಾತ್ರವನ್ನು ವಹಿಸುತ್ತದೆ, ಮತ್ತು ತನ್ಮೂಲಕವಾಗಿ ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವವನ್ನು ಉತ್ತೇಜಿಸುತ್ತದೆ ಮತ್ತು ಪರಿಸರವನ್ನು ರಕ್ಷಿಸುತ್ತದೆ.[18]

ಹಾಗಾಗಿ, ಶಿಕ್ಷಣ ವ್ಯವಸ್ಥೆಯ ಬಗ್ಗೆ ನಮಗೆ ಗಮನಾರ್ಹವಾದ ಮತ್ತು ಕೆಲವೊಮ್ಮೆ ಸ್ಪರ್ಧಾತ್ಮಕವಾದ ನಿರೀಕ್ಷೆಗಳು ಕಂಡುಬರುತ್ತವೆ - ಇವು ಕಾನೂನು ಮತ್ತು ಆಡಳಿತಾತ್ಮಕ ಚೌಕಟ್ಟು ಮತ್ತು ಧನಸಹಾಯವನ್ನು ಒದಗಿಸುವ ಸರ್ಕಾರದಿಂದ ಇರಬಹುದು, ತಮ್ಮ ಮಕ್ಕಳ ಪೋಷಣೆಯ ಜವಾಬ್ದಾರಿ ಹೊತ್ತಿರುವ ಪೋಷಕರಿಂದ ಇರಬಹುದು ಅಥವಾ ಶಿಕ್ಷಣದ ಹಕ್ಕುದಾರರಾಗಿರುವ ಮಕ್ಕಳಿಂದಲೇ ಇರಬಹುದು. ಕೆಲವೊಂದು ಎಲ್ಲರಿಗೂ ಸಾಮಾನ್ಯವಾದ ನಿರೀಕ್ಷೆಗಳಾಗಿವೆ: ಆರ್ಥಿಕ ಯಶಸ್ಸು, ಮೌಲ್ಯಗಳ ಬಲವರ್ಧನೆ ಮತ್ತು ಸಾಮಾಜಿಕ ಸ್ಥಾನಮಾನ. ಸರ್ಕಾರ ವಿಶಾಲ ಸಮಾಜದ ಬಗ್ಗೆ ಕಾಳಜಿ ಹೊಂದಿದ್ದರೆ, ಪೋಷಕರು ವೈಯಕ್ತಿಕವಾಗಿ ತಮ್ಮ ಮಗುವಿನ ಶ್ರೇಯೋಭಿವೃದ್ಧಿ ಬಗ್ಗೆ ಕಾಳಜಿ ವಹಿಸುತ್ತಾರೆ ಎಂಬ ಅಂಶವು ಶಿಕ್ಷಣದ ಕಾರ್ಯಸೂಚಿಯಲ್ಲಿ ಗಮನಾರ್ಹವಾದ ಉದ್ವಿಗ್ನತೆಯನ್ನು ಉಂಟುಮಾಡಬಹುದು ಮತ್ತು ಉಂಟುಮಾಡುತ್ತದೆ ಕೂಡ. ಈ ಉದ್ವಿಗ್ನತೆಗಳನ್ನು ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನು ಪರಿಗಣಿಸಿ, ಇದು ಪೋಷಕರಿಗೆ ಅವರ ನಂಬಿಕೆಗಳ ಪ್ರಕಾರ ಮಕ್ಕಳಿಗೆ ಶಿಕ್ಷಣ ನೀಡುವ ಹಕ್ಕನ್ನು ಮಾನ್ಯ ಮಾಡಿ, ಇದನ್ನು ಅಧಿಕೃತವಾಗಿ ಒಂದು ಹಕ್ಕು ಎಂದು ಪರಿಗಣಿಸುತ್ತದೆ.[19] ಇದು ಮಕ್ಕಳ ಮೇಲೆ ತನ್ನ ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಕಾರ್ಯಸೂಚಿಯನ್ನು ಹೇರುವ ಸರ್ಕಾರದ ಅಧಿಕಾರವನ್ನು ಮಿತಿಗೊಳಿಸುವ ಅಗತ್ಯವನ್ನು ಕೂಡ ಪ್ರತಿಬಿಂಬಿಸುತ್ತದೆ.

ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳನ್ನು ಕುರಿತ ಸಮಾವೇಶ (UN Convention on the Rights of the Child)ವು, ಇನ್ನೊಂದು ಹೆಚ್ಚುವರಿ ದೃಷ್ಟಿಕೋನವನ್ನು ಪರಿಚಯಿಸುತ್ತದೆ. ಇದು ಸರ್ಕಾರದ ಮೇಲೆ ಮಾತ್ರವಲ್ಲದೆ ಪೋಷಕರ ಮೇಲೂ ಮಿತಿಗಳನ್ನು ಹೇರುತ್ತದೆ. ಇದು, ಮಕ್ಕಳ ಮೇಲೆ ಪರಿಣಾಮ ಬೀರುವ ಯಾವುದೇ ವಿಷಯ ಅಥವಾ ವರ್ತನೆಗೆ ಸಂಬಂಧಿಸಿದಂತೆ, ಮಕ್ಕಳ ಹಿತಾಸಕ್ತಿ ಅತ್ಯಂತ ಪ್ರಮುಖವಾಗಿ ಪರಿಗಣಿಸಬೇಕು, ಅವರ ಅಭಿಪ್ರಾಯಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಮತ್ತು ಮಗುವಿನ ವಿಕಸನಗೊಳ್ಳುತ್ತಿರುವ ಸಾಮರ್ಥ್ಯಗಳನ್ನು ಗೌರವಿಸಬೇಕು ಎಂದು ಒತ್ತಾಯಿಸುತ್ತದೆ. ಇನ್ನೊಂದರ್ಥದಲ್ಲಿ ಹೇಳುವುದಾದರೆ, ಇದು ತಮ್ಮ ಮಗುವಿನ ಶಿಕ್ಷಣದಲ್ಲಿ ಪೋಷಕರ ಆಯ್ಕೆಯ ಸ್ವಾತಂತ್ರ್ಯದ ಹಕ್ಕನ್ನು ಅಷ್ಟರ ಮಟ್ಟಿಗೆ ನಿರ್ಬಂಧಿಸುತ್ತದೆ; ತಮ್ಮ ಮಕ್ಕಳ ಶಿಕ್ಷಣವನ್ನು ಆಯ್ಕೆಮಾಡುವ ಪೋಷಕರ ಹಕ್ಕುಗಳು ಸಂಪೂರ್ಣವಾಗಿರದೆ, ಮಕ್ಕಳು ದೊಡ್ಡವರಾಗುತ್ತಾ ಹೋದಂತೆ ಅವು ಕಡಮೆಯಾಗುತ್ತಾ ಹೋಗುವುದನ್ನು ನಾವು ಕಾಣಬಹುದು. ಪೋಷಕರ ಆಯ್ಕೆಯ ಹಿಂದಿನ ತಾರ್ಕಿಕತೆಯು ಮಗುವಿನ ಹಕ್ಕುಗಳ ನಿರಾಕರಣೆಯನ್ನು ಕಾನೂನುಬದ್ಧಗೊಳಿಸುವುದನ್ನು ತಪ್ಪಿಸುವುದಾಗಿದೆ. ಇದು ಶಿಕ್ಷಣದ ಮೇಲೆ ಸರ್ಕಾರವು ತನ್ನ ಏಕಸ್ವಾಮ್ಯ ಸಾಧಿಸುವುದನ್ನು ತಡೆಗಟ್ಟಿ, ಶೈಕ್ಷಣಿಕ ಬಹುತ್ವವನ್ನು ರಕ್ಷಿಸುತ್ತದೆ. ಪೋಷಕರ ಆಯ್ಕೆ ಮತ್ತು ಮಗುವಿನ ಹಿತಾಸಕ್ತಿಗಳ ನಡುವಿನ ಸಂಘರ್ಷದ ಸಂದರ್ಭದಲ್ಲಿ, ಮಗುವಿನ ಹಿತಾಸಕ್ತಿಗಳನ್ನು ಆದ್ಯತೆಯಾಗಿ ಪರಿಗಣಿಸಬೇಕಾಗುತ್ತದೆ.

ಹಾಗಾಗಿ ಶಿಕ್ಷಣದ ಹಕ್ಕು ಈ ಮೂರು ಪ್ರಮುಖ ಭಾಗೀದಾರರನ್ನು ಒಳಗೊಂಡಿದೆ: ಸರ್ಕಾರ, ಪೋಷಕರು ಮತ್ತು ಮಗು. ಈ ಮೂವರ ನಡುವೆ ಒಂದು ತ್ರಿಕೋನ ಸಂಬಂಧವಿದ್ದು, ಹಕ್ಕು ಆಧಾರಿತ ಶಿಕ್ಷಣದ ಅಭಿವೃದ್ಧಿಯಲ್ಲಿ ಈ ಮೂವರ ವಿಭಿನ್ನ ಉದ್ದೇಶಗಳನ್ನು ಸಮನ್ವಯಗೊಳಿಸಬೇಕಾದ ಅಗತ್ಯವನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಮುಖ್ಯವಾಗಿದೆ. ಇವರ ಹೊರತಾಗಿ, ಗಮನಾರ್ಹವಾದ ಕೊಡುಗೆ ಮತ್ತು ಜವಾಬ್ದಾರಿ ಹೊಂದಿರುವ ಇತರ ಭಾಗೀದಾರರೆಂದರೆ, ಶಿಕ್ಷಕರು, ಸ್ಥಳೀಯ ಸಮುದಾಯ, ನೀತಿ ನಿರೂಪಕರು, ಮಾಧ್ಯಮ ಮತ್ತು ಖಾಸಗಿ ವಲಯ.

**ಮಕ್ಕಳ ಹಕ್ಕುಗಳು ಮತ್ತು ಕರ್ತವ್ಯಗಳ ನಡುವೆ ಸಮತೋಲನ ಸಾಧಿಸುವುದು**

ಮಾನವ ಹಕ್ಕುಗಳು ಕರ್ತವ್ಯಗಳ ನಿರ್ವಹಣೆಯ ಮೇಲೆ ಅವಲಂಬಿತವಾಗಿಲ್ಲ. ಅವು ಜನ್ಮಜಾತ ಮತ್ತು ಸಾರ್ವತ್ರಿಕವಾಗಿವೆ. ಶಿಕ್ಷಣವನ್ನು 'ಗಳಿಸಬೇಕಾದರೆ' ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು ಎಂಬ ಯಾವುದೇ ರೀತಿಯ ಹೊಣೆಗಾರಿಕೆ ಮಗುವಿನ ಮೇಲೆ ಇರುವುದಿಲ್ಲ. ಆದರೂ, ಹಕ್ಕುಗಳು ಮತ್ತು ಕರ್ತವ್ಯಗಳ ನಡುವೆ, ಮಾನವ ಹಕ್ಕುಗಳ ಪರಸ್ಪರ ಕೊಡುಕೊಳ್ಳುವಿಕೆಯ ಸ್ವಭಾವದಲ್ಲಿ ಒಂದು ನೇರ ಮತ್ತು ಸಂಕೀರ್ಣವಾದ ಸಂಬಂಧವಿದೆ.

ಎಲ್ಲ ಮಕ್ಕಳಿಗೂ ಕಲಿಯುವ ಹಕ್ಕಿದೆ. ಇದರರ್ಥ ಅವರು ಶಾಲಾ ಪರಿಸರ ಮತ್ತು ಪ್ರಾಥಮಿಕ ಹಂತದಲ್ಲಿ ಮಾತ್ರವಲ್ಲದೆ, ಅನೇಕ ಸ್ಥಳಗಳಲ್ಲಿ ಪರಿಣಾಮಕಾರಿ ಕಲಿಕೆಯ ವಾತಾವರಣವನ್ನು ಪಡೆಯಲು ಅರ್ಹರಾಗಿದ್ದಾರೆ. ಆದರೆ ಅದರ ಜೊತೆಜೊತೆಗೆ ತಮ್ಮ ವರ್ತನೆಯಿಂದ ಇತರ ಮಕ್ಕಳ ಹಕ್ಕಿಗೆ ಚ್ಯುತಿ ಬಾರದಂತೆ ನಡೆದುಕೊಳ್ಳುವ ಜವಾಬ್ದಾರಿ ಕೂಡ ಅವರಿಗೆ ಇದೆ. ಎಲ್ಲ ಮಕ್ಕಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮತ್ತು ತಾವು ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಸೂಕ್ತ ಮನ್ನಣೆ ಪಡೆಯಲು ಅರ್ಹರಾಗಿದ್ದಾರೆ. ಇದು ಆಲಿಸುವುದು ಮತ್ತು ಮಾತನಾಡುವುದನ್ನು ಒಳಗೊಂಡಿದೆ. ಇದು ಪರಸ್ಪರ ಗೌರವವನ್ನು ಉತ್ತೇಜಿಸುವ ರಚನಾತ್ಮಕ ಸ್ಥಳಗಳ ರಚನೆಯಲ್ಲಿ ಮಕ್ಕಳು ಪಾತ್ರವಹಿಸುವ ಅಗತ್ಯವನ್ನು ಹೇಳುತ್ತದೆ. ಹಾಗೆಯೇ, ಶಿಕ್ಷಕರಿಗೆ ಮಕ್ಕಳ ಹಕ್ಕುಗಳನ್ನು ಕುರಿತಂತೆ ಹೇಗೆ ಜವಾಬ್ದಾರಿಯಿದೆಯೋ ಹಾಗೆಯೇ ಮಕ್ಕಳೂ ಸಹ ಶಿಕ್ಷಕರಿಗೆ ಬಗ್ಗೆ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ. ಪರಸ್ಪರ ಗೌರವದ ಅದೇ ತತ್ತ್ವಗಳು ಮಕ್ಕಳು ಮತ್ತು ವಯಸ್ಕರ ನಡುವೆಯೂ ಅನ್ವಯಿಸುತ್ತವೆ. ಹಿಂಸಾಚಾರದಿಂದ ರಕ್ಷಣೆ ಪಡೆಯುವ ಹಕ್ಕು ಮಕ್ಕಳು ಮತ್ತು ವಯಸ್ಕರಿಗೆ ಸಮನಾಗಿ ವಿಸ್ತರಿಸುತ್ತದೆ ಮತ್ತು ಆಕ್ರಮಣಶೀಲತೆ ಅಥವಾ ದೈಹಿಕ ಹಿಂಸೆಯನ್ನು ಬಳಸದೆ ಇರುವ ಜವಾಬ್ದಾರಿ ಮಕ್ಕಳ ಮೇಲೂ ಕೂಡ ಇದೆ. ಶಿಕ್ಷಕರು ಪಾಠಗಳನ್ನು ಸಿದ್ಧಪಡಿಸುವುದು, ಬೋಧನೆ, ಮಕ್ಕಳ ಅಭ್ಯಾಸ ಪುಸ್ತಕಗಳನ್ನು ತಿದ್ದುವುದು, ಪರೀಕ್ಷೆಗಳನ್ನು ನಡೆಸಿ, ಅದರ ಆಧಾರದ ಮೇಲೆ ಶ್ರೇಣೀಕರಣ ಮಾಡುವುದು, ಸಕಾರಾತ್ಮಕವಾಗಿ ತರಗತಿಯಲ್ಲಿ ಶಿಸ್ತನ್ನು ಕಾಪಾಡಿಕೊಳ್ಳುವುದು ಮತ್ತು ಮಕ್ಕಳಿಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶಗಳನ್ನು ಸೃಷ್ಟಿಸುವ ಜವಾಬ್ದಾರಿಯನ್ನು ಹೊತ್ತಿದ್ದರೆ, ಮಕ್ಕಳು ತಮ್ಮ ಕೆಲಸವನ್ನು ತಾವು ಮಾಡುವ, ಇತರ ಮಕ್ಕಳೊಂದಿಗೆ ಸಹಕರಿಸುವ, ತರಗತಿಯಲ್ಲಿ ಸುವ್ಯವಸ್ಥಿತವಾಗಿ ನಡೆದುಕೊಳ್ಳುವ, ಮತ್ತು ಎಲ್ಲಿಯವರೆಗೆ ಅವರ ಕೈಯಲ್ಲಿದೆಯೋ ಅಲ್ಲಿಯ ತನಕ ನಿಯಮಿತವಾಗಿ ಮತ್ತು ಸಮಯಕ್ಕೆ ಸರಿಯಾಗಿ ತರಗತಿಗೆ ಆಗಮಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ಮಕ್ಕಳು ಪರಸ್ಪರ ಹಕ್ಕುಗಳನ್ನು ಗೌರವಿಸುವುದನ್ನು ಕಲಿತುಕೊಳ್ಳಲು ಇರುವ ಪರಿಣಾಮಕಾರಿಯಾದ ಮಾರ್ಗವೆಂದರೆ, ಅವರ ಸ್ವಂತ ಹಕ್ಕುಗಳನ್ನು ಗೌರವಿಸುವ ವಾತಾವರಣವನ್ನು ಸೃಷ್ಟಿಸುವುದು. ಈ ಅನುಭವದ ಮೂಲಕ, ಅವರು ತಮ್ಮ ಹೊಣೆಯನ್ನು ಜವಾಬ್ದಾರಿಯಿಂದ ನಿರ್ವಹಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ.

**ಹಕ್ಕು-ಆಧಾರಿತ ವಿಧಾನದ ಅನುಷ್ಠಾನದಲ್ಲಿ ಉದ್ವಿಗ್ನತೆ**

ಸಾರ್ವತ್ರಿಕತೆ ಮತ್ತು ಸಮತೆಯ ತತ್ತ್ವಗಳ ಆಧಾರದ ಮೇಲೆ ಸ್ಥಾಪಿಸಲಾದ ಹಕ್ಕು-ಆಧಾರಿತ ಶಿಕ್ಷಣದ ವಿಧಾನದಲ್ಲಿ, ಅದರ ಅನುಷ್ಠಾನದ ಪ್ರಕ್ರಿಯೆಯಲ್ಲಿ ಅನಿವಾರ್ಯವಾಗಿ ಉದ್ವಿಗ್ನತೆಗಳು ಉದ್ಭವಿಸುವುದಿದೆ. ಇವುಗಳಲ್ಲಿ ಕೆಲವು ಸಂಪನ್ಮೂಲಗಳ ಮಿತಿಗಳನ್ನು ಕುರಿತಾಗಿದ್ದು, ಅವುಗಳನ್ನು ಈ ಹಕ್ಕನ್ನು ಸಾಕ್ಷಾತ್ಕಾರಗೊಳಿಸುವಲ್ಲಿರಬೇಕಾದ ಪ್ರಗತಿಪರ ಬದ್ಧತೆಯ ಮೂಲಕ ಮಾತ್ರ ಪರಿಹರಿಸಬಹುದು. ಇನ್ನು ಕೆಲವು ಉದ್ವಿಗ್ನತೆಗಳು ಹಕ್ಕುಗಳು ಎಂದರೇನು ಎಂಬ ಪರಿಕಲ್ಪನೆಯ ತಿಳಿವಳಿಕೆಯ ಕೊರತೆ ಅಥವಾ ಈ ಕೊರತೆಯನ್ನು ಪರಿಹರಿಸಲು ಅಳವಡಿಸಿಕೊಳ್ಳಬಹುದಾದ ಸಂಭಾವ್ಯ ತಂತ್ರಗಳ ಬಗ್ಗೆ ಸಾಕಷ್ಟು ತಿಳಿವಳಿಕೆಯಿಲ್ಲದಿರುವುದರಿಂದ ಹುಟ್ಟಿಕೊಂಡಿರುವುದಾಗಿವೆ. ಈ ಅಧ್ಯಾಯದ ಉಳಿದ ಭಾಗವು ಈ ಕೆಲವು ಉದ್ವಿಗ್ನತೆಗಳನ್ನು ಉದ್ದೇಶಿಸುತ್ತದೆ. ಅವುಗಳಲ್ಲಿ ಹೆಚ್ಚಿನವುಗಳಿಗೆ ಯಾವುದೇ ನೇರವಾದ ಪರಿಹಾರಗಳಿಲ್ಲ, ಆದರೆ ಅಧ್ಯಾಯ 3 ಮತ್ತು 4, ಎಲ್ಲರ ಮಾನವ ಹಕ್ಕುಗಳಿಗೆ ಬದ್ಧತೆಗೆ ಅನುಗುಣವಾಗಿ ಅವುಗಳಿಗೆ ಪರಿಹಾರ ಕಂಡುಕೊಳ್ಳಲು ತೆಗೆದುಕೊಳ್ಳಬಹುದಾದ ಕೆಲವು ವಿಧಾನಗಳ ಸೂಚನೆಗಳನ್ನು ಒದಗಿಸುತ್ತವೆ.

**ಅವಕಾಶ ಮತ್ತು ಗುಣಮಟ್ಟ**

ಸಂಪನ್ಮೂಲಗಳ ಕೊರತೆಯಿರುವಲ್ಲಿ, ಶಿಕ್ಷಣವನ್ನು ಸಾರ್ವತ್ರಿಕವಾಗಿ ಲಭ್ಯವಾಗುವಂತೆ ಮಾಡಬೇಕಾಗಿ ಬರುವಾಗ, ಅನಿವಾರ್ಯವಾಗಿ ಪ್ರತಿ ಮಗುವಿನ ಮೇಲೆ ವ್ಯಯಿಸಬೇಕಾದ ತಲಾ ನಿಧಿಯಲ್ಲಿ ಕಡಿತ ಉಂಟಾಗುತ್ತದೆ - ಇದು ಶಿಕ್ಷಕ-ವಿದ್ಯಾರ್ಥಿ ಅನುಪಾತದಲ್ಲಿ ಹೆಚ್ಚಳ, ಕಿಕ್ಕಿರಿದ ತರಗತಿಗಳು, ಪ್ರತಿ ತರಗತಿಯಲ್ಲಿ ಆವಶ್ಯಕವಾದ ಕಲಿಕಾ ಬೋಧನಾ ಸಂಪನ್ಮೂಲಗಳಲ್ಲಿ ಕಡಿತ, ಮತ್ತು ಕಡಮೆ ಗುಣಮಟ್ಟದ ಮೂಲಸೌಕರ್ಯಕ್ಕೆ ಕಾರಣವಾಗುತ್ತದೆ. ಇದರಿಂದಾಗಿ ಶಿಕ್ಷಣದ ಅವಕಾಶವನ್ನು ಸಾಧ್ಯಮಾಡುವ ಪ್ರಕ್ರಿಯೆಯಲ್ಲಿ ಶಿಕ್ಷಣದ ಗುಣಮಟ್ಟದೊಂದಿಗೆ ರಾಜಿಮಾಡಿಕೊಳ್ಳಬೇಕಾದ ಸಂದರ್ಭ ಉಂಟಾಗುತ್ತದೆ. ಈ ಸಂದರ್ಭಗಳಲ್ಲಿ, ಶಿಕ್ಷಣದ ಅವಕಾಶವು ಎಲ್ಲಕ್ಕಿಂತ ಹೆಚ್ಚಿನ ಆದ್ಯತೆಯಾಗಿದ್ದು, ಸಂಪನ್ಮೂಲಗಳ ಲಭ್ಯತೆಯ ಆಧಾರದ ಮೇಲೆ ಮಕ್ಕಳ ಗುಂಪುಗಳ ನಡುವೆ ತಾರತಮ್ಯ ಮಾಡಿ, ಕೆಲವರಿಗೆ ಮಾತ್ರ ಹೆಚ್ಚಿನ ಆದ್ಯತೆಯನ್ನು ನೀಡುವುದು ಸ್ವೀಕಾರಾರ್ಹವಲ್ಲ. ಆದರೂ, ಎಷ್ಟು ಸಾಧ್ಯವೋ ಅಷ್ಟುಮಟ್ಟಿಗೆ, ಎಲ್ಲ ಮಕ್ಕಳಿಗೂ ಗುಣಮಟ್ಟದ ಶಿಕ್ಷಣದ ಅವಕಾಶ ಖಚಿತಪಡಿಸಿಕೊಳ್ಳಲು ಬಜೆಟ್ ಹಂಚಿಕೆಯನ್ನು ಹೆಚ್ಚಿಸುವ ಪ್ರಯತ್ನಗಳನ್ನು ಮಾಡಬೇಕಾಗಿದೆ. ತಾರತಮ್ಯ ಮಾಡುವ ಪ್ರವೃತ್ತಿಯ ವಿರುದ್ಧ ಎಚ್ಚರವಹಿಸುವ ಆವಶ್ಯಕತೆ ಇದ್ದು, ಯಾವುದೇ ಆಧಾರದ ಮೇಲೆ ತಾರತಮ್ಯ ಮಾಡದೆ ಶೈಕ್ಷಣಿಕ ಆವಶ್ಯಕತೆಗಳೆಡೆಗೆ ಸಂಪನ್ಮೂಲ ವಿನಿಯೋಗವಾಗುವಂತೆ ದಾನಿಗಳು ನೋಡಿಕೊಳ್ಳಬೇಕಾಗುತ್ತದೆ.

**ಸಮತೆ ಮತ್ತು ದಕ್ಷತೆ**

ಎಲ್ಲ ಮಕ್ಕಳಿಗೆ ಶಾಲಾ ಶಿಕ್ಷಣವನ್ನು ಲಭ್ಯವಾಗುವಂತೆ ಮಾಡಲು ಅಗತ್ಯವಾದ ವಿಧಾನಗಳು ಕಡಮೆ ಪರಿಣಾಮಕಾರಿಯಾಗಿಯೂ ಮತ್ತು ಹೆಚ್ಚು ವೆಚ್ಚದಿಂದಲೂ ಕೂಡಿರಬಹುದು. ಉದಾಹರಣೆಗೆ, ಹಳ್ಳಿಗಳಲ್ಲಿ ಅಲ್ಲಲ್ಲಿ ಶಾಲೆಗಳನ್ನು ಸ್ಥಾಪಿಸಿ, ಅಭಿವೃದ್ಧಿಪಡಿಸುವುದು ಹೆಚ್ಚು ದುಬಾರಿಯಾಗಿದ್ದರೂ, ಇದು, ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಲು ಪೋಷಕರನ್ನು ಪ್ರೋತ್ಸಾಹಿಸುವ ಏಕೈಕ ಮಾರ್ಗವಾಗಿದೆ. ರಾಷ್ಟ್ರೀಯ ಭಾಷೆಯನ್ನು ಮಾತನಾಡದ ಎಲ್ಲ ಮಕ್ಕಳನ್ನು ಒಂದು ಪ್ರತ್ಯೇಕ ಶಾಲೆಯಲ್ಲಿ ಇರಿಸುವುದು ಹೆಚ್ಚು ಆರ್ಥಿಕವಾಗಿ ಪರಿಣಾಮಕಾರಿ ಎನ್ನಿಸಬಹುದು, ಆದರೆ ಹಾಗೆ ಮಾಡುವುದರಿಂದ ಇತರ ಮಕ್ಕಳೊಂದಿಗೆ ಸಮಾನವಾಗಿ ಶಿಕ್ಷಣ ಪಡೆಯುವ ಅವರ ಹಕ್ಕನ್ನು ನಿರಾಕರಿಸಿದಂತಾಗುತ್ತದೆ. ಅವರವರ ಪರಿಸರದಲ್ಲಿ ಯಾವ ವಿಧಾನ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬಹುದು ಎಂಬುದನ್ನು ಅನ್ವೇಷಿಸಲು ಮಕ್ಕಳು, ಪೋಷಕರು ಮತ್ತು ಸಮುದಾಯಗಳೊಂದಿಗೆ ಸಮಾಲೋಚಿಸುವುದು ಮುಖ್ಯವಾಗಿದೆ. ಇದು ಶಿಕ್ಷಣದ ಅವಕಾಶವನ್ನು ಬಲಪಡಿಸಲು ಅಗತ್ಯವಾದ ಉತ್ತರದಾಯಿತ್ವ ಮತ್ತು ಸಹಯೋಗದ ಪ್ರಜ್ಞೆಯನ್ನು ನಿರ್ಮಿಸಲು ಸಹಾಯ ಮಾಡುತ್ತದೆ. ಸ್ಥಳೀಯ ಸಮುದಾಯ ಒಪ್ಪದೆ ಹೋಗುವಂತಹ ವೆಚ್ಚ-ಪರಿಣಾಮಕಾರಿ ವ್ಯವಸ್ಥೆಯನ್ನು ವಿನ್ಯಾಸಗೊಳಿಸುವುದರಲ್ಲಿ ಯಾವುದೇ ಅರ್ಥವಿಲ್ಲ.

**ಸಾರ್ವತ್ರಿಕತೆ ಮತ್ತು ವೈವಿಧ್ಯ**

ಸಾಂಸ್ಕೃತಿಕ, ಭಾಷಿಕ ಮತ್ತು ಧಾರ್ಮಿಕ ಅಸ್ಮಿತೆಗಳಿಗೆ ಸಂಬಂಧಿಸಿದಂತೆ ಭಿನ್ನತೆಯ ಬಗ್ಗೆ ಗೌರವ ಮತ್ತು ಪ್ರತಿಯೊಬ್ಬ ವ್ಯಕ್ತಿ ವಿಭಿನ್ನವಾಗಿ ಇರಲು ಇರುವ ಹಕ್ಕನ್ನು ಮಾನವ ಹಕ್ಕುಗಳ ವಿಶಾಲ ಗುಂಪಿನ ಭಾಗವಾಗಿ ಶಿಕ್ಷಣದ ಸಾರ್ವತ್ರಿಕ ಹಕ್ಕಿನೊಂದಿಗೆ ಸಮನ್ವಯಗೊಳಿಸಬೇಕಾಗಿದೆ. ಎಲ್ಲರಿಗೂ ಸಾರ್ವತ್ರಿಕ ಶಿಕ್ಷಣವನ್ನು ಖಾತ್ರಿಪಡಿಸುವ ಶೈಕ್ಷಣಿಕ ಮಾರ್ಗ ಮತ್ತು ಮಾರ್ಗಸೂಚಿಗಳು ಸ್ಥಳೀಯ ಮತ್ತು ಪ್ರಾದೇಶಿಕ ವ್ಯತ್ಯಾಸಗಳಿಗೆ, ವಿಶೇಷವಾಗಿ ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಭಿನ್ನತೆಗಳನ್ನು ಗೌರವಿಸಿ, ಅದಕ್ಕೆ ತಕ್ಕಂತೆ ಅದನ್ನು ರೂಪುಗೊಳಿಸಬೇಕಾದ ಅಗತ್ಯವನ್ನು ಹೊಂದಿವೆ. ಇದನ್ನು ಮಾಡಲು ವಿಫಲವಾಗುವುದೆಂದರೆ, ಎಲ್ಲ ಸಮುದಾಯಗಳನ್ನು ತಲಪುವಲ್ಲಿ ಯಶಸ್ವಿಯಾಗಿಲ್ಲ ಎಂಬುದನ್ನು ಸೂಚಿಸುತ್ತದೆ.

**ಆದ್ಯತೆಗಳು ಮತ್ತು ಕೊಡುಕೊಳ್ಳುವಿಕೆಗಳು**

ಸಂಪನ್ಮೂಲದ ಕೊರತೆ ಇರುವ ಸಂದರ್ಭದಲ್ಲಿ ಒಂದನ್ನು ಪಡೆಯಲು, ಇನ್ನೊಂದನ್ನು ಕೈಬಿಡಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಉದಾಹರಣೆಗೆ, ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಹೂಡಿಕೆ ಮಾಡಬೇಕಾಗಿ ಬರುವ ಸಂದರ್ಭದಲ್ಲಿ, ಮಾಧ್ಯಮಿಕ ಶಿಕ್ಷಣಾವಕಾಶಕ್ಕೆ ಹೂಡಿಕೆಯನ್ನು ಕಡಮೆ ಮಾಡುವುದು, ಅಥವಾ ವಿಶೇಷ ಆವಶ್ಯಕತೆ ಇರುವ ಮಕ್ಕಳಿಗೆ ಶೈಕ್ಷಣಿಕ ಅವಕಾಶಗಳ ಅಭಿವೃದ್ಧಿಯ ಕೆಲಸಗಳನ್ನು ಮುಂದೂಡುವುದು, ಇತ್ಯಾದಿ. ವಾಸ್ತವಿಕವಾಗಿ, ಎಲ್ಲ ಮಕ್ಕಳಿಗೆ ಶಿಕ್ಷಣದ ಹಕ್ಕನ್ನು ತತ್ ಕ್ಷಣವೇ ಖಚಿತಪಡಿಸಲು ಎಲ್ಲ ಸರ್ಕಾರಗಳು ತಮ್ಮ ಬಾಧ್ಯತೆಗಳನ್ನು ಒಮ್ಮೆಲೇ ಪೂರೈಸಲು ಸಾಧ್ಯವಿಲ್ಲ. ಆದಾಗ್ಯೂ, ಹಣಕಾಸು ಮತ್ತು ಮಾನವ ಸಂಪನ್ಮೂಲಗಳು ಸೀಮಿತವಾಗಿರುವಲ್ಲಿ, ಹಂತಹಂತವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಸಾರ್ವತ್ರಿಕ ಪ್ರವೇಶದ ಉದ್ದೇಶವನ್ನು ಸಾಧಿಸಲು ಸರ್ಕಾರಗಳು ಸ್ಪಷ್ಟವಾದ ಕಾರ್ಯತಂತ್ರ ಮತ್ತು ಯಾವ ಕಾಲಾವಧಿಯೊಳಗೆ ಏನನ್ನು ಸಾಧಿಸಬೇಕು ಎಂಬುದರ ಖಚಿತತೆ ಇರಬೇಕು ಮತ್ತು ಪ್ರತಿಯೊಂದು ಕಾರ್ಯಹಂತವು 'ಸರ್ವರಿಗೂ ಶಿಕ್ಷಣ'ದ ಹಕ್ಕಿನ ವಿಶಾಲ ಉದ್ದೇಶದ ಸಂಪೂರ್ಣ ಸಾಕ್ಷಾತ್ಕಾರಕ್ಕೆ ಪೂರಕವಾಗಿ ಕೆಲಸ ಮಾಡಬೇಕು.

**ಫಲಿತಾಂಶಗಳು ಮತ್ತು ಪ್ರಕ್ರಿಯೆ**

ಸಹಸ್ರಮಾನದ ಅಭಿವೃದ್ಧಿ ಗುರಿಗಳಂತಹ (Millennium Development Goals) ಗುರಿಗಳನ್ನು ಸಾಧಿಸುವಲ್ಲಿನ ಒತ್ತಡವು ತತ್ ಕ್ಷಣಕ್ಕೆ ಫಲಿತಾಂಶಗಳನ್ನು ನೀಡಲು ಅನುಕೂಲವಾಗುವಂತಹ ಕಾರ್ಯತಂತ್ರಗಳನ್ನು ವಿನ್ಯಾಸಗೊಳಿಸಲು ಕಾರಣವಾಗಬಹುದು, ಆದರೆ ಅದು ಅರ್ಥಪೂರ್ಣ ಶಿಕ್ಷಣ ಸಾಧಿಸುವಲ್ಲಿ ಅಗತ್ಯವಾದ ಬದ್ಧತೆ ಮತ್ತು ಸಾಮರ್ಥ್ಯವನ್ನು ಬೆಳೆಸಲು ಅಗತ್ಯವಾದ ದೀರ್ಘಾವಧಿಯ ಸಾಮಾಜಿಕ ಬದಲಾವಣೆಯಲ್ಲಿ ತೊಡಗಿಸಿಕೊಳ್ಳುವಲ್ಲಿ ವಿಫಲಗೊಳ್ಳುತ್ತದೆ. ಉದಾಹರಣೆಗೆ, ಶಾಲೆಗಳ ಮತ್ತು ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸುವುದರಿಂದ ದಾಖಲಾತಿ ಪ್ರಮಾಣದಲ್ಲಿ ಏರಿಕೆಯಾಗಬಹುದು, ಆದರೆ ಮಕ್ಕಳ ನಿರ್ದಿಷ್ಟ ಸಂದರ್ಭಗಳನ್ನು ಗಣನೆಗೆ ತೆಗೆದುಕೊಂಡು ಅದಕ್ಕೆ ತಕ್ಕಂತೆ ವ್ಯವಸ್ಥೆ ಮಾಡದೆ ಹೋಗುವುದರಿಂದ, ಆರಂಭದಲ್ಲಿ ಶಾಲೆಗೆ ಸೇರಿದ ಮಕ್ಕಳು ಕ್ರಮೇಣವಾಗಿ ಶಾಲೆ ಬಿಡುವ ಪ್ರಮಾಣದಲ್ಲಿ ಕೂಡ ಹೆಚ್ಚಳವಾಗಬಹುದು. ಶಾಲಾ ದಾಖಲಾತಿ, ಹಾಜರಾತಿ, ಅಪೇಕ್ಷಣೀಯ ಮಟ್ಟದ ಸಾಧನೆ ಮತ್ತು ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಮಕ್ಕಳು ಮತ್ತು ಅವರ ಪೋಷಕರೊಂದಿಗೆ ಅಗತ್ಯ ಸಮಾಲೋಚನೆಗಳನ್ನು ಕೈಗೊಳ್ಳುವುದು ಮುಖ್ಯವಾಗುತ್ತದೆ; ಬಡತನವನ್ನು ಪರಿಹರಿಸಲು ಅಗತ್ಯವಾದ ಆಡಳಿತ ನೀತಿಗಳು; ಹೆಚ್ಚು ಸೂಕ್ತವಾದ ಪಠ್ಯಕ್ರಮದ ಅಭಿವೃದ್ಧಿ; ಮತ್ತು ದೈಹಿಕ ಮತ್ತು ಅವಮಾನಕರ ಶಿಕ್ಷೆಗಳನ್ನು ತೊಡೆದುಹಾಕುವುದು ಸೇರಿದಂತೆ ಶಾಲೆಯಲ್ಲಿ ಮಕ್ಕಳ ಹಕ್ಕುಗಳಿಗೆ ಗೌರವ ಮುಖ್ಯವಾಗುತ್ತದೆ.

**ಅಲ್ಪಾವಧಿ ಮತ್ತು ದೀರ್ಘಾವಧಿಯಲ್ಲಿನ ತುರ್ತು ಪ್ರತಿಕ್ರಿಯೆಗಳು**

ತುರ್ತು ಪರಿಸ್ಥಿತಿಗಳಲ್ಲಿ, ನಮ್ಮ ತತ್ ಕ್ಷಣದ ಗಮನವು ಅನಿವಾರ್ಯವಾಗಿ ಬದುಕುಳಿಯುವಿಕೆ, ಆಹಾರ, ನೀರು, ಆಶ್ರಯ ಮತ್ತು ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸುವುದಕ್ಕೆ ಸೀಮಿತವಾಗುತ್ತದೆ. ಆದರೆ ಮಕ್ಕಳಿಗೆ, ಕೈತಪ್ಪಿ ಹೋದ ಶಿಕ್ಷಣದ ಅವಕಾಶವನ್ನು ಮತ್ತೆ ಪಡೆಯುವುದು ಕೇವಲ ಅವರ ಹಕ್ಕು ಮಾತ್ರವಾಗಿರದೆ, ಬದುಕಿನಲ್ಲಿ ಸಹಜತೆಯನ್ನು ಮರುಸ್ಥಾಪಿಸಲು, ಮಾನಸಿಕ ಆಘಾತವನ್ನು ನಿವಾರಿಸಲು, ಬದುಕುಳಿಯುವ ಸಾಮರ್ಥ್ಯವನ್ನು ನಿರ್ಮಿಸಲು ಮತ್ತು ಅವ್ಯವಸ್ಥೆಯನ್ನು ಮೀರಿ ಒಂದು ಸುವ್ಯವಸ್ಥೆಯನ್ನು ಸ್ಥಾಪಿಸುವ ನಿಟ್ಟಿನಲ್ಲಿ ಅಗತ್ಯವಾದ ಸಂಪನ್ಮೂಲವಾಗಿದೆ. ಯಾವುದೇ ಬಿಕ್ಕಟ್ಟಿನ ಅನಂತರ ತತ್ ಕ್ಷಣಕ್ಕೆ ಶಾಲಾ ಶಿಕ್ಷಣದ ವ್ಯವಸ್ಥೆಯನ್ನು ಮರುಸ್ಥಾಪಿಸಲು ವಿನ್ಯಾಸಗೊಳಿಸಲಾದ ಕಾರ್ಯಕ್ರಮಗಳ ಸಕಾರಾತ್ಮಕ ಉದಾಹರಣೆಗಳ ಸಂಖ್ಯೆ ಹೆಚ್ಚುತ್ತಿದೆ (ಪುಟ 61 ರಲ್ಲಿ ಕೊಟ್ಟಿರುವ 'ಅಪಾಯದ ಸಂದರ್ಭಗಳು' ನೋಡಿ). ದೀರ್ಘಾವಧಿಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಖಾತರಿಪಡಿಸುವ ಸಮಾನಾಂತರ ಅಗತ್ಯದೊಂದಿಗೆ, ಈ ಕಷ್ಟಕರ ಸಂದರ್ಭಗಳಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಮಕ್ಕಳು ಶಾಲೆಗೆ ಹಾಜರಾಗುವುದನ್ನು ಖಚಿತಪಡಿಸಿಕೊಳ್ಳಬೇಕು.

**ಶಿಕ್ಷಕರ ಮತ್ತು ಮಕ್ಕಳ ಹಕ್ಕುಗಳು**

ಮಕ್ಕಳ ಹಕ್ಕುಗಳಿಗೆ ಗೌರವವನ್ನು ನೀಡುವುದೆಂದರೆ ತಮಗೆ ಸಿಗಬೇಕಾದ ಗೌರವವನ್ನು, ತಮ್ಮ ಹಕ್ಕುಗಳನ್ನು ಅವಗಣಿಸಿದಂತೆ ಎಂದು ಕೆಲವೊಮ್ಮೆ ಶಿಕ್ಷಕರು ವಾದಿಸುತ್ತಾರೆ. ದೈಹಿಕ ಶಿಕ್ಷೆಯನ್ನು ನಿಷೇಧಿಸುವುದು ಅಥವಾ ಮಕ್ಕಳ ಹಿತಾಸಕ್ತಿಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ನಿರ್ಧಾರಗಳಲ್ಲಿ ವಿದ್ಯಾರ್ಥಿಗಳನ್ನು ಒಳಗೊಳ್ಳುವುದು ಅವರ ಸ್ಥಾನಮಾನವನ್ನು ಕಡಮೆ ಮಾಡುತ್ತದೆ, ಮತ್ತು ಇದು ಶಿಸ್ತು ಪಾಲನೆಯನ್ನು ಕಷ್ಟಕರವಾಗಿಸುತ್ತದೆ ಎಂಬ ತಪ್ಪು ಅಭಿಪ್ರಾಯ ಅವರಲ್ಲಿ ಉಂಟಾಗಬಹುದು. ಈ ದೃಷ್ಟಿಕೋನವು, ಹಕ್ಕುಗಳು ಇಂತಿಷ್ಟೇ ಎಂದಿರುತ್ತವೆ ಮತ್ತು ಅವುಗಳಲ್ಲಿ ಒಂದು ವರ್ಗಕ್ಕೆ ಹೆಚ್ಚು ಕೊಡುವುದೆಂದರೆ, ಇನ್ನೊಂದು ವರ್ಗಕ್ಕೆ ಅದನ್ನು ಕಡಮೆ ಮಾಡಿದಂತೆ ಎಂಬ ಭಾವನೆಯಿಂದ ಹುಟ್ಟಿಕೊಂಡಿದೆ. ಅಷ್ಟೇ ಅಲ್ಲದೆ ಇದು ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧದಲ್ಲಿ ಶಿಕ್ಷಕರು ಅಧಿಕಾರಸ್ಥಾನದಲ್ಲಿರುವವರು ಎಂಬ ತಿಳಿವಳಿಕೆಯಿಂದ ಕೂಡ ಬಂದಿದೆ. ಮಕ್ಕಳ ಹಕ್ಕುಗಳನ್ನು ಗೌರವಿಸುವುದರಲ್ಲಿ ಅಧಿಕಾರದ ವರ್ಗಾವಣೆ ಇದ್ದರೂ ಕೂಡ, ಅದು ಶಿಕ್ಷಕರ ಹಕ್ಕುಗಳನ್ನು ಕಸಿದುಕೊಳ್ಳುವುದಾಗಲಿ, ಕಡಮೆ ಮಾಡುವುದಾಗಲಿ ಮಾಡುವುದಿಲ್ಲ. ವಾಸ್ತವದಲ್ಲಿ ನೋಡುವುದಾದರೆ, ಪರಸ್ಪರ ಗೌರವವಿಲ್ಲದೆ ಇರುವ ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧವು ಶಿಥಿಲವಾಗಿರುತ್ತದೆ. ಮಕ್ಕಳ ಹಕ್ಕುಗಳನ್ನು ಗೌರವಿಸುವ ಶಾಲಾ ವಾತಾವರಣವನ್ನು ರಚಿಸುವುದರಿಂದ ಶಿಕ್ಷಕರ ಪಾತ್ರಕ್ಕೆ ಹೆಚ್ಚಿನ ಗೌರವ ಬರುತ್ತದೆ. ಆದರೆ ಈ ಸಂಬಂಧದ ಪೂರ್ಣ ಸಕಾರಾತ್ಮಕ ಫಲಿತಾಂಶವನ್ನು ಪಡೆಯಲು ಶಿಕ್ಷಕರಿಗೆ ಸೂಕ್ತ ಬೆಂಬಲ ವ್ಯವಸ್ಥೆ ಮತ್ತು ಸಂಪನ್ಮೂಲ ಲಭ್ಯತೆಯ ಆವಶ್ಯಕತೆ ಇದೆ.

**ಕೆಲಸ ಮತ್ತು ಶಾಲೆ**

ಮಕ್ಕಳ ಜೀವನದಲ್ಲಿ ದೈಹಿಕ ಕೆಲಸದ ಪಾತ್ರದ ಬಗ್ಗೆ ವಿವಾದಗಳು ಮುಂದುವರೆಯುತ್ತಿವೆ.[20] ಇದು ಎಷ್ಟರ ಮಟ್ಟಿಗೆ ಮುಂದಿನ ಜೀವನಕ್ಕೆ ಸಿದ್ಧತೆಯನ್ನು ಒದಗಿಸುತ್ತದೆ ಎಂಬುದು ಒಂದು ಕಡೆಯಾದರೆ, ಮತ್ತೊಂದೆಡೆ ಇದು ಎಷ್ಟರ ಮಟ್ಟಿಗೆ ಶೈಕ್ಷಣಿಕ ಫಲಿತಾಂಶಗಳಿಗೆ ಅಡ್ಡಿಪಡಿಸುತ್ತದೆ ಎಂಬುದರ ಬಗ್ಗೆ ಉದ್ವಿಗ್ನತೆಗಳಿವೆ. ಸ್ವೀಕಾರಾರ್ಹವಾದ ಮತ್ತು ಶಿಕ್ಷಣದ ಹಕ್ಕಿನ ಜೊತೆಜೊತೆಗೆ ತೆಗೆದುಕೊಂಡು ಹೋಗಬಹುದಾದ ಕೆಲಸದ ಯಾವುದಾದರೂ ವಿಧಗಳು ಇವೆಯೇ ಎಂಬ ಬಗ್ಗೆ, ಅಥವಾ ಕಡ್ಡಾಯ ಶಾಲಾ ಶಿಕ್ಷಣದ ವರ್ಷಗಳಲ್ಲಿ ಮಕ್ಕಳಿಗೆ ಯಾವುದೇ ರೀತಿಯ ಕೆಲಸವನ್ನು ಕೊಡುವುದನ್ನು ನಿಷೇಧಿಸಬೇಕೇ ಎಂಬ ಬಗ್ಗೆ ಒಮ್ಮತ ಮೂಡಿಲ್ಲ. ಮಕ್ಕಳ ಹಕ್ಕುಗಳ ಸಮಾವೇಶವು ಮಕ್ಕಳನ್ನು ಅವರ ಅಭಿವೃದ್ಧಿಗೆ ಹಾನಿಕಾರಕವಾದ ಅಥವಾ ಅವರ ಶಿಕ್ಷಣಕ್ಕೆ ಅಡ್ಡಿಪಡಿಸುವ ಎಲ್ಲ ರೀತಿಯ ಕೆಲಸಗಳಿಂದ ರಕ್ಷಿಸಬೇಕು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO) ಒಡಂಬಡಿಕೆಯ, 182ನೇ ಅಂಶವು ಯಾವ ಎಲ್ಲ ಕೆಟ್ಟ ರೀತಿಯಲ್ಲಿ ಮಕ್ಕಳನ್ನು ಕೆಲಸಕ್ಕೆ ಹಚ್ಚಲಾಗುತ್ತದೆ ಎಂಬುದನ್ನು ವಿವರಿಸುತ್ತಾ, ಈ ರೀತಿಯ ಕೆಲಸಗಳಿಂದ ಮಕ್ಕಳನ್ನು ರಕ್ಷಿಸಬೇಕಾದ ಸರ್ಕಾರಗಳ ಜವಾಬ್ದಾರಿಗಳನ್ನು ಸ್ಪಷ್ಟಪಡಿಸುತ್ತದೆ. ಈ ರಕ್ಷಣೆಗಳನ್ನು ಖಾತರಿಪಡಿಸುವಂತಹ ಕಾನೂನು ಮತ್ತು ಆಡಳಿತ ನೀತಿಗಳನ್ನು ಪರಿಚಯಿಸಬೇಕಾದ ಜವಾಬ್ದಾರಿ ಸರ್ಕಾರಗಳದ್ದಾಗಿದೆ. ಅಷ್ಟೇ ಅಲ್ಲದೆ, ಗುಣಮಟ್ಟ ಮತ್ತು ಪ್ರಸ್ತುತತೆಯ ದೃಷ್ಟಿಯಿಂದ ಉದ್ಯೋಗಕ್ಕೆ ಪರ್ಯಾಯವಾಗಿ ಕಾರ್ಯಸಾಧುವಾದ ಶಿಕ್ಷಣವನ್ನು ಒದಗಿಸುವುದು ಸರ್ಕಾರಗಳ ಕರ್ತವ್ಯವಾಗಿದೆ; ಮಕ್ಕಳನ್ನು ಕೆಲಸಕ್ಕೆ ತಳ್ಳುವಂತಹ ಬಡತನ ಮತ್ತು ಜೀವನೋಪಾಯದ ಅಭದ್ರತೆಯನ್ನು ಪರಿಹರಿಸುವಂತಹ ನೀತಿಗಳನ್ನು ಪರಿಚಯಿಸುವುದು; ಮತ್ತು ಕೆಲಸ ಮಾಡುವುದನ್ನು ಬಿಟ್ಟು ಬೇರೆ ಆಯ್ಕೆಯಿಲ್ಲದ ಮಕ್ಕಳಿಗೆ, ಅವರ ಸಮಯ ಸಂದರ್ಭಗಳಿಗನುಗುಣವಾಗಿ, ಸಮನ್ವಯ ಶಿಕ್ಷಣದ ಅವಕಾಶಗಳನ್ನು ಸೃಷ್ಟಿಸಬೇಕಾದ ಬಾಧ್ಯತೆ ಸರ್ಕಾರಗಳಿಗಿದೆ.

ವೃದ್ಧಿಪಡಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.